UNIVERSAL LIBRARY
OU_200795
UNIVERSAL LIBRARY

# ಚೆಂಗಲವೆ

ಪಾಂಡೇಶ್ವರ ಗಣಪತಿರಾವ್

ಪ್ರಥಮ ಮುದ್ರಣ

1940

(*All rights reserved*)

Price: As. 10] [ಬೆಲೆ: ೧೦ ಆಣೆ.

PUBLISHED BY

**BALIGA & SONS, PUTTUR & MANGALORE**

ಬಾಳಿಗ ಎಂಡ್ ಸನ್ಸ್, ಪ್ರಕಾಶಕರು, ಪುತ್ತೂರು—ಮಂಗಳೂರು

PRINTED AT THE
BASEL MISSION PRESS (CANARAG LTD.),
MANGALORE, S.K.

# ಮುನ್ನುಡಿ

*O blithe new-comer! I have heard,*
*I hear thee and rejoice:*
*O Cuckoo! shall I call thee Bird,*
*Or but a wandering Voice!*

ಶ್ರೀ ಪಾಂಡೇಶ್ವರ ಗಣಪತಿರಾಯರೆಂದರೆ ನಮ್ಮ ತುಳುನಾಡಿನದೊಂದು ಹಾಡುಹಕ್ಕಿ, ಹಾರುಹಕ್ಕಿ. ಹಾಡಿ ಹಾರುತ್ತಲೂ ಹಾರಿ ಹಾಡುತ್ತಲೂ ಇರುವ ಶೆಲ್ಲಿಯ (Shelley) ಬಾನಕ್ಕಿಯಂತೆ ಇದೂ ರೆಂಬೆಗಳಲ್ಲಿ ತಂಗಿರುವಂದಲ್ಲ, ರೆಕ್ಕೆಗಳಲ್ಲಿ ಈಸಾಡುವಂದು, ಗೂಡಿನ ನೆರೆಯಿಂದಲ್ಲ, ಮೋಡಗಳ ಮರೆಯಿಂದ ಹಾಡುವ ಹಕ್ಕಿ. ತನಗೆ ಗರಿ ಚಿಗುರುವಂದಿಗೆ ಬಯಲಾದ ಸುಖಗಳ ಕನಸೂ ರೆಕ್ಕೆ ಸಿಗುರುವೊಂದಿಗೆ ಕವಿತಂದ ದುಃಖಗಳ ನೆನಸೂ ಅವಷ್ಟೇ ಇದರ ಬೆಳವಣಿಗೆಯ ತಿನಿಸು. ಆ ಇಬ್ಬನಿಗಳನ್ನು ಸೇದಿ ಬೆಳೆದ ಹಕ್ಕಿ ಹೇಗೆ ತಾನೆ ಹಾಡದಿರಬೇಕು! ಅದರ ಹಾಡು ಹೇಗೆ ತಾನೆ ನಸಿಗೂಡದಿರಬೇಕು!

ಪಾಂಡೇಶ್ವರರು ಬ್ರಹ್ಮಾವರದೊಂದು ದೊಡ್ಡ ಮನೆಯವರು, ದೊಡ್ಡ ಮನೆತನದವರು. ಆದರೆ ದುರದೃಷ್ಟದಿಂದ ಅವರ ಎಳವೆಯಲ್ಲಿಯೇ ಆ ಸಿರಿವಂತಿಕೆಯೂ ಕನಸಾಗಿ, ಆಬಳಿಕ ಆ ಊರಿನಲ್ಲಿ ಕವಿತಂದ ಸಿಡುಬಿಗೆ ಅವರಲ್ಲಿಯ ಹಲವರೂ ತುತ್ತಾಗಿ, ಅಲ್ಲಿಂದ ಅವರ ಸುಖದ ಆಶೆ ಹೊಗೆಯಾಯಿತು, ಇನ್ನು ಮೋಡಗಳ ಮರೆಯಾಯಿತು. ಆ ಕಗ್ಗಾಲದ ನೆನವು ಅವರ ಹಾಳೂರ ಕತೆಯಲ್ಲಿ ಹೃದಯದ್ರಾವಿಯಾಗಿ ಚಿತ್ರಿತವಾಗಿದೆ. ಅಥವಾ ಅವರೊಮ್ಮೆ ನನಗೆ ಹೇಳಿದ ಮಾತುಗಳನ್ನು ನೆನವರಿಸಿ ಹೇಳುವುದಾದರೆ— ಮನೆಗೆ ಸಾಕಷ್ಟು ಮಂದಿ ಇಲ್ಲ; ಮನೆತುಂಬ ಕಂಬಗಳೇ; ಚಿಕ್ಕಂದಿನಲ್ಲಿ ಆಡುತ್ತಿದ್ದ ಆ ಕಂಬಗಳ ಬಳಿಯಿಂದಾದರೂ ನುಸುಳಲಿಕ್ಕೆ ಈಗ ಮೆಟ್ಟು ಮಿಸುಕದು; ದೀಪ ಹಚ್ಚುವುದೇ ಸರಿ, ಆ ಕಂಬಗಳ ನೆರಳೆಂದರೆ ಇನ್ನು ತೋರದವರ ಅಡ್ಡಾಟವೇ ಸೈ; ಹೊರಗೂ ಒಳಗೂ ಬರಿದು. ಆ ಬರಿದನ್ನು ಮಾತುಕಥೆಯಿಂದಾದರೂ ತುಂಬಿಸೋಣ ಅಂದರೆ ಮಾತಿಗೆ ಮಾತು ಬಾರದ ತೊಡಕು ಬೇರೆ, ತನ್ನ ಮಾತೇ ತನಗೆ ಕೇಳಿಸುವ ಅಳುಕು ಬೇರೆ. ಇನ್ನು ಬದುಕು ಕನಸಾಯಿತು, ಕನಸು ಬದುಕಾಯಿತು. ಕಾಲು ನಿತ್ತಲ್ಲಿ ನಿಲ್ಲದು, ಮನಸ್ಸು

ಮನೆಯಲ್ಲಿ ಒಲ್ಲದು. ಕೊನೆಗೆ 1931ರಲ್ಲೇನೊ ಅವರು ಊರನ್ನೇ ಬಿಟ್ಟು ಹೋದರು. ಬಿಸಿನೀರಿನ ಬುಗ್ಗೆಯ ಬಳಿಯಲ್ಲಿ ಎಳವಕ್ಕಿ ಎಷ್ಟು ಕಾಲ ತಾನೆ ತಳುವೀತು?

1928ರಲ್ಲಿ ಇವರ ಹೂಗೊಂಚಲು ಎಂಬ ಕವಿತಾಗುಚ್ಛವನ್ನು ಮಂಗಳೂರಿನ ಉದಯಭಾರತದಲ್ಲಿ ವಿಮರ್ಶಿಸುವಲ್ಲಿ ಅದರಲ್ಲಿಯ ಪ್ರತಿ ಕವಿತೆಯಲ್ಲಿ ಕವಿತಾಶಕ್ತಿಯ ತೇಜಸ್ಸಿದೆ, ಅದು ನಡುಹಗಲ ಕಡೆಗೆ ಬೆಳೆವಂತೆ ಕಾಣುತ್ತದೆ ಎಂದು ನಾನು ಅಂದು ಹೇಳಿದ ಮಾತು ಇಂದು ಈ ಚೆಂಗಲವೆಯಲ್ಲಿ ಈಡೇರಿರುವುದು ನನಗೆ ತುಂಬ ಸಂತೋಷಕರ, ಕನ್ನಡಕ್ಕೆ ಉತ್ಸಾಹಕರ. ಅಲ್ಲಿ

ಅಂಬಿ ಅಂಬಿ ವೀಣೆ ಇಂತು
ಬಾಜಿಸಿರುವನೆ!

ಎಂದಿರುವ ಈ ಕವಿ ಇಲ್ಲಿ ಆ ವೀಣೆಯನ್ನು ಗಂಧರ್ವರ ನೈಪುಣ್ಯದಿಂದ ಇಷ್ಟು ಇಂಪಾಗಿ ಇಷ್ಟು ಸೊಂಪಾಗಿ ಬಾಜಿಸಿರುವುದು ಕನ್ನಡಕ್ಕೆ ಕೀರ್ತಿಕರ, ತುಳುನಾಡಿಗೆ ಅಭಿಮಾನಕರ.

ಈ ಚೆಂಗಲವೆಯಲ್ಲಿಯ ಕವಿತೆಗಳು ಹೃದಯದಿಂದ ಒಗುತ್ತಿವೆ, ಹೃದಯವನ್ನು ಹೊಗುತ್ತಿವೆ. ಪ್ರತ್ಯೇಕ ಕವಿತೆಯಲ್ಲಿ ಜೀವವಿದೆ, ಭಾವವಿದೆ; ಮಾಧುರ್ಯವೂ ಇದೆ, ಸೌಂದರ್ಯವೂ ಇದೆ; ಬಿದಿರೊಳಗಣ ಗಾಳಿಯಂತೆ ಭಾವವೂ ಸ್ವರವೂ ಒಂದಾಗುವ ಆ ಶಬ್ದ-ಚಿತ್ರಗಳ ಸಂಪೃಕ್ತಿಯೂ ಇದೆ. ಕಾವ್ಯಕಲೆಗೆ ಇದಕ್ಕಿಂತ ಹೆಚ್ಚಿಗೆ ಬೇರೇನು ಬೇಕು? ಇಂಥಾ ಕವಿತೆಗಳನ್ನು ಕುರಿತು ಹೆಚ್ಚೇಕೆ ಹೇಳಬೇಕು? ***Good wine needs no bush.***

ಕೀಟ್ಸ್ (Keats) ಕವಿಯ ಕಿನ್ನರಿ ಹಾಡುಗಳನ್ನು ಓದಿ ಹೇಗೋ ಹಾಗೆ ಇವರ ಹಲವು ಹಾಡುಗಳನ್ನೂ ಓದಿ ಮನವರಿಸುವಲ್ಲಿ

*Was it a vision, or a waking dream?*

ಎಂಬ ಅದೊಂದು ಅನಸ್ವಾದ್ಯಶವಾದ ಆತ್ಮವಿಸ್ಮೃತಿಯ ಅನುಭವವಾಗುತ್ತದೆ. ಆ ಮೆಯ್ಮರವೆಯಿಂದ ಎಚ್ಚರುವಾಗ

***Thou wast not born for death, immortal Bird!***

ಎಂದು ಹೃದಯವು ತನ್ನಷ್ಟಕ್ಕೆ ಬಾಯಿಬಿಡುತ್ತದೆ.

ಇವರು ಕವಿತೆಗಳನ್ನೇ ಅಲ್ಲ, ಉದಯಭಾರತದಲ್ಲಿ ಕೆಲವು ಕಥೆಗಳನ್ನೂ 'ಹಾಳೂರ ದೊರೆ' ಎಂಬ ಅಪೂರ್ಣ ನಾಟಕವನ್ನೂ ಬರೆದಿದ್ದಾರೆ. ಮತ್ತೆ

ಕಥೆಗಳನ್ನು ಒರೆದಿಲ್ಲವೇಕೋ ಇನ್ನೂ ಆ ನಾಟಕವನ್ನು ಮುಗಿಸಿಲ್ಲವೇಕೋ ತಿಳಿಯದು. ಇವರು ರಚಿಸಿದ ಕೆಲವು ಚಲೋ ಇಂಗ್ಲೀಷು ಗೀತಗಳನ್ನೂ ಓದಿದಂತೆ ನನಗೆ ನೆನಪಿದೆ.

ಇವರು ಇನ್ನೂ ಮೇಲುಮೇಲಾದ ಕವಿತೆಗಳನ್ನು ರಚಿಸಿ ತಮ್ಮ 'ಸುವಿಮಲ ಸುರಸ ಸ್ವನದ ಸುಧಾರಸ'ವನ್ನು ಕನ್ನಡದಲ್ಲಿ ಸುರಿಸುತ್ತಿರಲಿ, ಕನ್ನಡದ

ಮಾತಿನಾಕಾಶದಲಿ
ಗೀತದಾವೇಶದಲಿ
ಹಾಡುತೀ ಹಕ್ಕಿ ಹಾರಾಡುತಿರಲಿ!

ಬಹುಕಾಲ ಬಾಳುತ್ತಿರಲಿ ಎಂದು ಹಾರಯ್ಸುತ್ತೇನೆ.

ಮಂಜೇಶ್ವರ,
29ನೆ ಸಪ್ಟಂಬರ 1940.

ಗೋವಿಂದ ಪೈ

# ಅರಿಕೆ

ಕಡಲಕರೆಯ ಹಳ್ಳಿಯ ಮೂಲೆಯಲ್ಲಿ ಕಣ್ದೆರೆದ ಈ ಕವಿದೀಪ ಮಿಣುಗಲಾರಂಭಿಸಿ ಇಂದಿಗೆ ಹದಿನೈದು ವರುಷಗಳು ದಾಟಿದಂತಾಗಿದೆ. ಕನ್ನಡದಲ್ಲಿಂದು ಖ್ಯಾತರಾದ ಕವಿಗಳನೇಕರು ಹುಟ್ಟಿ, ಹಾಡಿ, ಕನ್ನಡ ತಾಯ ಕೀರ್ತಿಯನ್ನು ಸರ್ವತ್ರ ಹಬ್ಬಿಸುತ್ತಿರುವುದರಿಂದ, ಈ ಕವಿಯು ಪಡತಕ್ಕ ಹೆಚ್ಚಳವೇನೂ ಇರುವುದಿಲ್ಲ. ಆದಾಗ್ಯೂ, 1928ರಲ್ಲಿ "ಹೂಗೊಂಚಲು" ಪ್ರಕಟವಾದ ಬಳಿಕ ರಚಿತವಾದ ಕವನಗಳನ್ನು ಹಾಗೆಯೇ ಅಪ್ರಕಟಿತವಾಗಿರಿಸುವುದು ವಿಹಿತವಲ್ಲವೆಂದೆಣಿಸಿ, ಈ ಸಂಗ್ರಹವನ್ನೀಗ ಬೆಳಕಿಗೆ ತರಲಾಗಿದೆ.

ಈ ಸಂಗ್ರಹದ ಕವಿತ್ವಗಳಲ್ಲಿ ನೂರಕ್ಕೆ ತೊಂಬತ್ತರಷ್ಟು 1932ನೆ ಇಸವಿಯ ಮೊದಲೇ ರಚಿತವಾಗಿದ್ದು, ಜಯಕರ್ನಾಟಕ, ಪ್ರಬುದ್ಧಕರ್ನಾಟಕ, ಸುವಾಸಿನಿ, ಉದಯಭಾರತ, ವಸಂತ, ಕರ್ನಾಟಕಧುರೀಣ—ಮುಂತಾದ ಪತ್ರಿಕೆಗಳಲ್ಲಿ ಆಗಿಂದಾಗಲೇ ಪ್ರಕಟಗೊಂಡಿದ್ದುವು. 1932ರ ತರುವಾಯ ರಚಿತಗೊಂಡಿರುವ ಕವನಗಳಲ್ಲಿ ಚಿಕ್ಕಚಿಕ್ಕದಾದ ಕೆಲವನ್ನು ಮಾತ್ರ ಇಲ್ಲಿ ಪ್ರಕಟಿಸಲಾಗಿದೆ.

ಶ್ರೀಮಾನ್ ಗೋವಿಂದ ಪೈಗಳವರು ನನ್ನ ಬಿನ್ನಪವನ್ನು ಮನ್ನಿಸಿ, ಈ ಚೆಂಗಲವೆಗೊಂದು ಮುನ್ನುಡಿಯನ್ನು ಬರೆದುದಕ್ಕೆ ನಾನು ಅವರಿಗೆ ಚಿರಋಣಿಯಾಗಿರುವೆನು.

ಕವಿತಾ ಪುಸ್ತಕಗಳನ್ನು ಪ್ರಕಟಿಸುವುದು ಸರ್ವಥಾ ಲಾಭದಾಯಕವಲ್ಲ—ಎಂಬುದನ್ನು ಮನಗಂಡೂ, ಸಾಹಿತ್ಯಾಭಿರುಚಿಯಿಂದಲೇ ಈ ಸಂಗ್ರಹವನ್ನು ಪ್ರಕಟಿಸುವ ಸರ್ವ ಸ್ವಾಮ್ಯವನ್ನೂ ಪ್ರೇಮಪೂರ್ವಕವಾಗಿ ವಹಿಸಿಕೊಂಡು, ಇಷ್ಟೊಂದು ಅಂದವಾಗಿ ಮುದ್ರಿಸಿ, ಬೆಳಕಿಗೆ ತಂದಿರುವ ಶ್ರೀಯುತ ದಾಮೋದರ ಬಾಳಿಗ, ಬಿ. ಎ. ಇವರಿಗೆ ಅತ್ಯಂತ ಕೃತಜ್ಞನಾಗಿರುವೆನು.

ಇಲ್ಲಿನ ಕವನಗಳಲ್ಲಿ ಹಲವನ್ನು ತಂತಮ್ಮ ಪತ್ರಿಕೆಗಳಲ್ಲಿ ಆಗಿಂದಾಗಲೇ ಪ್ರಕಟಿಸಲೆಡೆಗೊಟ್ಟ ಎಲ್ಲ ಸಂಪಾದಕ ಮಹಾಶಯರುಗಳಿಗೂ ನಾನು ವಂದನೆಯನ್ನರ್ಪಿಸುತ್ತೇನೆ.

ಹುಬ್ಬಳ್ಳಿ,
ಸಪ್ಟಂಬರ 1940.

**ಪಾಂಡೇಶ್ವರ ಗಣಪತಿರಾವ್.**

*"This simple bard unbroke by rules of art*
*Pours the wild effusions of the heart."*

# ಅನುಕ್ರಮಣಿಕೆ


| ಪಾಠ | | ಪುಟ |
|---|---|---|
| ೧. | ಮೊದಲಮಾತು | ೧ |
| ೨. | ಕಾವ್ಯ—ಪ್ರಾಸ | ೨ |
| ೩. | ಕವಿತೆ | ೩ |
| ೪. | ಪಂಡಿತವಕ್ಕಿ | ೪ |
| ೫. | ಕೋಗಿಲೆಗೆ | ೬ |
| ೬. | ತನುಗೊಳಲು | ೭ |
| ೭. | ಒಂದು ಭಾವ | ೮ |
| ೮. | ಆರುನೀನೆಂದೆನ್ನ ಕೇಳಿದವರುಂಟೆ | ೮ |
| ೯. | ಪಡಿನುಡಿ | ೯ |
| ೧೦. | ಅನ್ವೇಷಣ | ೧೧ |
| ೧೧. | ಎಂತಿಹನೊ—ಎಲ್ಲಿರುವನೊ | ೧೪ |
| ೧೨. | ಗುರುದೇವ | ೧೫ |
| ೧೩. | ನೀತಿ | ೧೬ |
| ೧೪. | ಮಾಯೆ | ೧೭ |
| ೧೫. | ಕಡೆನುಡಿ | ೧೮ |
| ೧೬. | ಆಶೆ | ೧೯ |
| ೧೭ | ನಿರಾಶೆ | ೨೦ |
| ೧೮. | ವಿಧಿಗೆ | ೨೧ |
| ೧೯. | ಮಧುಮಾಸದುದಯ | ೨೨ |
| ೨೦. | ಸುಮ್ಮನಿಹುದೇಕೆ | ೨೩ |
| ೨೧. | ರಸಲೀಲೆ | ೨೪ |
| ೨೨. | ರಾಗ | ೨೫ |
| ೨೩. | ಉಷೆ | ೨೬ |
| ೨೪. | ಒಂದು ಪ್ರಾತಃಕಾಲ | ೨೮ |
| ೨೫. | ಮಳೆಹನಿ | ೨೯ |
| ೨೬. | ಮಳೆಮುಗಿಲ ತಾರೆಗಳು | ೩೦ |
| ೨೭. | ಒಂದು ಸಂಜೆ | ೩೧ |
| ೨೮. | ಸಂಜೆ ಬಂತು | ೩೨ |
| ೨೯. | ಇರುಳೆ | ೩೪ |
| ೩೦. | ತಾರೆ ಮತ್ತು ಮುಗುಳು | ೩೫ |
| ೩೧. | ಮೌನ—ಮಾತು | ೩೬ |

| ಪಾಠ | | ಪುಟ |
|---|---|---|
| ೩೨. | ಹೂಗಳು | ೩೭ |
| ೩೩. | ಮಲೆನಾಡಿನ ಒಂದು ಹಳ್ಳಿ | ೩೮ |
| ೩೪. | ಗೋವಳರು | ೪೧ |
| ೩೫. | ಯಾತ್ರಿಕರ ಹೊಳೆಯ ಪಯಣ | ೪೨ |
| ೩೬. | ವರುಷವಿಂತು ಕಳೆಯುತಿಹುದು | ೪೪ |
| ೩೭. | ಕನ್ನಡಕುಲ | ೪೫ |
| ೩೮. | ದಿನವಿದಿಲ್ಲಿ ನಿಮಿಷವಾಯ್ತು | ೪೭ |
| ೩೯. | ಮನೆಯ ನೆನಪು | ೪೮ |
| ೪೦. | ಹಾಳೂರ ಕತೆ | ೫೦ |
| ೪೧. | ಅಕಾಲಮೃತ್ಯು | ೫೪ |
| ೪೨. | ಒಡಹುಟ್ಟಿದವರ ಸ್ಮೃತಿ | ೫೬ |
| ೪೩. | ದಾಂಪತ್ಯದ ಮುನ್ನುಡಿ | ೫೯ |
| ೪೪. | ಅರಸಿ ಎಂತಿಹಳೊ | ೬೧ |
| ೪೫. | ಶಕುಂತಲಾ | ೬೨ |
| ೪೬. | ಕೃಷ್ಣಾಕುಮಾರಿ | ೬೩ |
| ೪೭. | ಜೇಕು | ೬೪ |
| ೪೮. | ಕ್ರಿಸ್ತಜನ್ಮ | ೬೬ |
| ೪೯. | ಸನ್ಯಾಸಿ | ೭೦ |
| ೫೦. | ಶ್ರೀರಂಗಪಟ್ಟಣ | ೭೩ |
| ೫೧. | ಮಹಾತ್ಮಾ ಗಾಂಧಿಗೆ | ೭೬ |
| ೫೨. | ಕನ್ನಡ ತಾಯ ಪಾದಕ್ಕೆ | ೭೭ |

## ೧. ಮೊದಲ ಮಾತು

೧

ಎದೆಯ ಗುಹೆಯನು ತುಂಬಿ.
ತುಂಬಿ ಹೊರಹೊಮ್ಮಿ,
ನುಡಿಯ ಪರಿಮಳಿಸಿ, ಜನ
ಮನವ ಸೆರೆಗೊಳಿಸಿ,
ಎದೆಯೊಳಾವುದೊ ಅರಳಿ
ಉಲಿಸುತಿಹುದೆನ್ನ.

೨

ಮನದ ಮೌನದಿ ಮಿಂಚಿ.
ಮಿಂಚಿ ಹೊರ ಚಿಮ್ಮಿ.
ಕನಸ ನೆನಸಾಗಿಸುತ
ಮನವ ಮೋಹಿಸುತ,
ಮನದೊಳಾವುದೊ ಸಿಂದು
ನುಡಿಸುತಿಹುದೆನ್ನ.

## ೨. ಕಾವ್ಯ-ಪ್ರಾಸ

ಕಲ್ಲುಸಕ್ಕರೆಯವೊಲಿನಿದಾದ ಕಡುನುಡಿ,
ದ್ರಾಕ್ಷೆಯಂದದ ಮೃದುಪದವು
ಸಲ್ಲಸಲ್ಲೆಯರ ಸಂಗಮದಂತೆ ಸಮನಿಸೆ
ಚೆಲ್ವುಕ್ಕು ಕಾವ್ಯ ಸಂಪದವು.

ಪ್ರಾಸವಸುಸಿರೆಂದು ಹೆಸರಿಸಿದವರುಂಟು,
ಗಾಸಿಯಾದವರುಂಟು ಬರದೆ;
ಪಸು ಜಸ್ಮದ ವ್ಯಾಧಿ ಎಂದದ ದ್ವೇಷಿಸಿ,
ಗಸಣೆಗೊಂಡವರುಂಟು ಬರಿದೆ!

ಭಾವವಿಲ್ಲದ ಕಾವ್ಯ, ಜೀವವಿಲ್ಲದ ದೇಹ
ರಸಗೆಟ್ಟ ಕಬ್ಬಿನ ಕಸವು;
ಹಾವಭಾವಗಳೊಂದನರಿಯದೆ ನರ್ತಿಪ
ಬೆಲೆವೆಣ್ಣ ಬರಿಮೆಯ್ಯ ಕಸುವು!

ಜನರ ಮೆಚ್ಚಿಸಲೆಂದು ಬರೆದ ಬಣ್ಣದ ಮಾತು
ಮನವನಿಳ್ಕೀಗೊಳದಿರದು;
ಜನರಿಚ್ಛೆ ಮೆಚ್ಚಿಗೆ ಗುಣದೋಷದಚ್ಚಿಗೆ
ಸಿರಿ ಬಡತನ ಬಳ್ಳವಿರದು!

## ೩. ಕವಿತೆ

ಪ್ರೇಮ ಪರಿಪೂತ ಪರಿಮಳಸಾರ ಕವಿತೆ!
ಪರಿಂತು ಎನ್ನೆದೆಯ ತಂಪಿಸೊಳಗವಿತೆ!
ನಿನ್ನ ಜಯಕೇತನಂ ಗಾಳಿಯೊಳಗಲೆಯೆ,
ಮರ್ತ್ಯನೆನ್ನಿಟ್ಟುಸಿರು ಅದರ ಬೆಂಬಳಿಯೆ
ನಲಿನಲಿದು ಹಾರುತಿರಲೊಂದು ಮೃದುಗೀತಂ
ಪರಿಹರಿಸಲೆನ್ನೆದೆಯ ಪ್ರಣಯ ಪರಿತಾಪಂ,
ಅದರಿಸೊಗೆತಂದುವದೆ ದಿವ್ಯ ಸಂಗೀತಂ,
ಅದು ಮೃದುಲ ಶೋಕಮೆನ್ನೀ ಪ್ರಣಯ ಕೋಪಂ.
ಸಿಲುಕಿದೆನಿದೋ! ನಿನ್ನ ತೋಳ ನಲ್ಮೆಯಲಿ.
ಅದರಿಸಂಕುರಿಸಿದಜ್ಞತೆಯ ಒಲ್ಮೆಯಲಿ
ಹಲವು ಶಾಸ್ತ್ರಂಗಳ ವಿಚಾರದೊಲ್ಮೆಯಲಿ
ಎನಗಿದಕಟಾ! ಸೊಗಂ ಶೂನ್ಯ ತಾಳ್ಮೆಯಲಿ.
ಅರಿತೆ ನಾ ನಿನ್ನ ಕೈ ಪಿಡಿದುದಪರಾಧಂ
ಎಂಬುದನ್ನಿಂದಿಗದೋ. ಅದರಿನೀ ಕ್ರೋಧಂ.

## ೪. ಪಂಡಿತವಕ್ಕಿ

೧

ಮರವೆಯುರ ಮುಸುಕಿರುವ
ಕಾಲದಡವಿಯಲಿ,
ಗರಿ ಮುದುರಿ ಕುಳಿತು ತೂ
ಕಡಿಪ ವೇಳೆಯಲಿ,
ಇತಿಹಾಸ ಸೂತ್ರದಲಿ
ಕೋದ ಮುತ್ತುಗಳ,
ಸತ್ಯಮಿಥ್ಯಗಳ ಸಂ
ವಾದ ಬಿತ್ತುಗಳ,
ತಿಂದಿನಿಸು ತೃಪ್ತಿಯನು
ತೋರದಿದೆ ಹಕ್ಕಿ —
ಮುಂದಿರುವ ಮೃತ್ಯುವನು
ಕಾಣ ಕಣ್ಣಿಕ್ಕಿ!

೨

ರನ್ನಪಂಪಾದಿಗಳ
ಕಾವ್ಯಕಾನನದ
ಉನ್ನತೋನ್ನತ ವೃಕ್ಷ
ರಾಜ ಸಂಪದದ
ನಿನ್ನೆಗಳ ನೆನೆನೆನೆದು
ಮರುಳ ಮೌನದಲಿ
ತನ್ನ ತಾನರಿಯದೆಯೆ
ಶುಷ್ಕ ವ್ಯಾಜದಲಿ
ಹಾಡುವುದ ಮರೆತಿಂತು
ಕುಳಿತೆಯೋ ಹಕ್ಕಿ?
ಹಾಡಲರಿಯದೆ ನಾವು
ಅಳುತಿಹೆವು ಬಿಕ್ಕಿ!

೨೪

ಕಾಲ ಮೀರುತಲಿಹುದು
    ಕಳ್ಳ ಹಜ್ಜೆಯಲಿ,
ಲೋಲರಾಗಿಹರೆಲ್ಲ
    ಸುಳ್ಳು ಪಜ್ಜೆಯಲಿ —
ನಮ್ಮ ತೋಟದ ಹಕ್ಕಿ
    ಗಿಲ್ಲ ಕೊರಲಿಂಪು,
ಸುಮ್ಮನಾಂತಿಹವೇನೊ
    ಹೊರಮೈಯ ಪೆಂಪು!
ಸವಿಗೊರಲ ಕೋಗಿಲೆಯ
    ಕುಕಿಲ ಕಲ್ಪನೆಯ
ಕಿವುಡುಗೇಳುವರುಂಟೆ?
    ನಲಿಸು ಕಾಮನೆಯ.

# ೪. ಕೋಗಿಲೆಗೆ

೧

ಉಲ್ಲಸಂತ ವಸಂತ
ನುಲ್ಲಾಸದಿಂ ನಿಂತ
ಸಾಮ್ರಾಜ್ಯದಿಂದ ಬಂದೆ
ಕೋಗಿಲೆಯೆ,
ಈ ಗಾನ ಲಹರಿ ತಂದೆ?

೨

ನೀರೆಯರ ವಿರಹದುರಿಯಾ
ಕೋಗಿಲೆಯೆ,
ಬಲಿಸುತಲಿ ಬಳೆವ ಪರಿಯಾ
ತಳಿರ ತೆರೆಮರೆಯಿಂದ
ಉಲಿವ ಮೆಲ್ದನಿಯಿಂದ
ತಂಗಾಳಿಗೊಲಿದು ನುಡಿದು
ಕೋಗಿಲೆಯೆ,
ಕವಿಯ ನೀ ಕರೆವುದರಿದು*!

೩

ಹಾಡುವೀ ಹಕ್ಕಿಗಳಲಿ,
ಕೋಗಿಲೆಯೆ,
ರಾಣಿ ನೀ; ಬಾಂದಳದಲಿ
ಹಾಡಗನಸುಗಳೆಂಬ
ತಾರೆಗಳ ನಿಕುರುಂಬ
ರಾಗದಿಂ ರಚಿಸುತಿಹೆಯಾ?
ಕೋಗಿಲೆಯೆ,
ಭೋಗ ವಿಸ್ಮೃತಿಯ ತಹೆಯಾ?

---

* ಅರಿದು = ಅಚ್ಚರಿ.

೪

ನೀರಸೀರೆಯರ ನಲ್ಮೆ,
ಕೋಗಿಲೆಯೆ,
ನಿನ್ನುಸಿರ ಸವಿಯ ಬಲ್ಮೆ!
ನಲ್ಮೆ ಹಾಡನೆ ಹಾಡಿ,
ಮಾಮರದೊಳಲೆದಾಡಿ.
ಕಣ್ಗೆ ಮರೆಯಾಗುತಿರುವೆ,
ಕೋಗಿಲೆಯೆ,
ಕವಿಗಿಂತು ಕನಸ ತರುವೆ!

## ೮. ತನುಗೊಳಲು

ಎನ್ನಯ ತನುವಿದು ಕೊಳಲಹುದೇ ಹರಿ
ನಿನ್ನ ಕೈಯ ಸ್ಪರ್ಶವು ಬಹುದೆ?
ಸರಳ ಮುರಳಿ ಸಂಗೀತ ಸಮೀರದಿ
ದುರಿತ ನೀರದವ ಚೆದರಿಸುತೆನ್ನೆದೆ
ಸರಸಿಜ ಮಧ್ಯದ ಭಕ್ತಿ ಸೌರಭವ
ತ್ವರಿತದಿ ನೀ ಸ್ವೀಕರಿಸೆಲೊ ತಂದೆ!

ಭೋಗಕೇಂದ್ರವೆನ್ನೀ ತನುಗೊಳಲಿದ
ರಾಗದೇಳ್ಗೆಯಾ ಮೃದುಲರವದ ವೈ
ರಾಗ್ಯ ರೇಣುವಲಿ ನಿಲಿಸುತ ನಲಿಸ್ಮೆ
ತ್ಯಾಗ ಪುಲಕವನು ಅರಳಿಸು ತಂದೆ!
ಕೊಳಲಿನ ಸುಮಧುರ ಗಾನಲಹರಿಯಲಿ
ಫಲಿತ ಭೋಗ ವೈರಾಗ್ಯವು ಜನದಲಿ
ನಿಲುಕಲಿ, ನೆಲಸಲಿ, ಪಾದಪದೊಳು ಹರಿ
ಒಲಿದು ಬಾಜಿಸೀ ಕೊಳಲನು ತಂದೆ!

ಕಣ್ಣಿಗಗೋಚರ ಕೊಳಲ ಗಾನದೊಳು
ಮನ್ಮನದಲಿ ತವನಾದ ಬಿಂದು ಸಲೆ
ಉನ್ಮತ್ತ ತಳಿರಿಸೆ ವಿಶ್ವಪ್ರೇಮವನು,
ಸನ್ಮಾನಿತ ಸುಮಸುರಭಿಯದಾಗಲಿ!

## ೭. ಒಂದೇ ಭಾವ

೧

ಮಲ್ಲಿಗೆಯ ಮೊಗ್ಗೆಯಿದು
ಅರಳಿರುವುದಲ್ಲ,
ಮಾಲತಿಯ ಮಕರಂದ
ಹೊರಸೂಸಿತಲ್ಲ!
ಎನ್ನ ಜೀವನಲತೆಯ
ಹೂವರಳಲಿಲ್ಲ!
ಬಣ್ಣಬಣ್ಣದ ಕನಸು
ಕಣ್ತೆರೆಯಲಿಲ್ಲ!

೨

ಯೌವನವೆ ನಿನಗೇಕೆ
ಸುಡುಗಾಡ ಚಿಂತೆ.
ಜೀವವಾಹಿನಿಯತ್ತ
ಅಡಿಯಿಡುವ ಮುಂತೆ?!

## ೮. ಆರು ನೀನೆಂದೆನ್ನ ಕೇಳಿದವರುಂಟೆ

ಆರು ನೀನೆಂದೆನ್ನ ಕೇಳಿದವರುಂಟೆ ಈ
ಧಾರಿಣಿಯೊಳಿನಿತೊಂದು ಜನರ ಮಧ್ಯದಲಿ?
ಮೊರೆವ ತೆರೆಯನೆ ಮುಟ್ಟಿ, ನೊರೆವಿಂಡುಗಳ ದಟ್ಟಿ
ಸಿರುವರಲ್ಲದೆ ಎನ್ನ ಎದೆಯಾಳದಿ
ಮಿರುಗುವೀ ಮೌನದೇಕ ಜ್ಯೋತಿಯನೆ ಕಂಡು
ಬೆರಗುವಟ್ಟವರಿಲ್ಲ; ಬರಿಯ ಗುಲ್ಲು!

## ೫. ಪಡಿನುಡಿ

೧

ಹುಣ್ಣಿಮೆಯ ನಟ್ಟಿರುಳ
    ಮೌನದಲ್ಲಿ
ಇಬ್ಬದಿಯ ಕಾಡುಗಳ
    ಮಧ್ಯದಲ್ಲಿ
ಹರಿವ ಕಾಲ್ದಾರಿಯಲಿ
ನಾನಡೆಯುತಿರಲಲ್ಲಿ
ಕಂಡಳಾವಳೊ ಮುಖಸಿ
    ರಭ್ರಳಾಗಿ
ಜೊನ್ನಝರಿಯಲಿ ಮಿಂದು
    ಶುಭ್ರಳಾಗಿ.

೨

ಹರಿವ ಕಾಲ್ದಾರಿಯಲಿ
ನನ್ನ ಕಣ್ಣೆದಿರಿನಲಿ
ಸಪ್ಪಳಾಗದೊಲಾಕೆ
    ನಡೆಯುತಿಹಳು,
ಮೊಗ್ಗೆಯಲಿ ಪರಿಮಳವ
    ಸೂದುತಿಹಳು.

೩

ಆರು ನೀನೆಂದವಳ
ಕರೆಕರೆದು ಕೇಳಿದೆನು,
ಆರು ನೀನೆಂದೆನಗೆ
    ಪಡಿನುಡಿವಳು.
ನೀರೆ ಮೌನದಿನೆದೆಯ
    ಸೆರೆವಿಡಿವಳು.

೩೮

ಪಸರಿಸಿದ ಸಸಿಸೆಯೊಳ
ಗುಸಿರ ನಿಡುಸರ ಮೆಲ್ಲ
ನೊಸರಿದುದ ಕೇಳಿ ಎದೆ
ತಳಮಳಿಸಿತು,
ತೀಡಿದೆಲರಿಂ ತಳಿರಾ
ನಳನಳಿಸಿತು.

೩೯

ಕಣಿವೆಯಲಿ, ಕಾಡಿನಲಿ,
ಬೆಟ್ಟದಿಬ್ಬದಿಗಳಲಿ
ನಡೆನಡೆದು ನೋಡಿ ಕ
ಣ್ಮರೆಯಾದಳು,
ಕಾನನದ ಕೌಮುದಿಯೊ
ಳೊಂದಾದಳು.

## ೧೦. ಅನ್ವೇಷಣಾ

೧

ಆರನರಸುವೆಯಿಂತು
ಗಿರಿದುರ್ಗಗಳ ತಿರುಗಿ,
ಭೂರಿ ಭಾಗ್ಯಗಳ ಕಡೆ
    ಗಣ್ಚಿ ತಿರುತಿರುಗಿ?
ಈ ದಾರಿಯಲಿ ನಡೆದ
ನೆಂದು ನುಡಿವರ ಕಾಣೆ,
ಹಾದಿ ಕವಲೊಡೆದಿಹುದ
    ನಂತವಾಗಿಲ್ಲಿ!
ಹೂಗಳೆಲ್ಲವ ಕುಯ್ದು,
ಮುಗುಳ ಮುಟ್ಟದ ಕುರುಹು
ತೋರುತಿದೆ; ಅವನಿಂತು
    ಪೋಗಿರ್ಪನೆ?

೨

ನೋಡದೋ, ನೋಡಲ್ಲಿ
    ಮಂದಾರ ತರುವ!
ಅದರೆದುರು ನಳನಳಿಪ
    ಸುರಗಿಹೂ ಮರವ!
ಅಲ್ಲೆ ಬಿತ್ತರಿಸಿಹುದು
    ಬಯಲ ಭೂಮಿ,
ಬಯಲ ಮಧ್ಯದಿ ಹರಿವು
    ದದುವೆ ದಾರಿ!
ಹಾದಿ ನಡೆ, ಅಲ್ಲಲ್ಲಿ
    ಒಗೆದ ತಿಳಿಗೊಳದಿ
ನಳನಳಿಪ ತಾವರೆಗ
    ಳನು ಕೆಲವ ಕೊಂಡು.
ಆರ ನೀನರಸುವೆಯೊ,

ಅವನಿಗದೆ ತೃಪ್ತಿ;
ಅವನ ತೃಪ್ತಿಯೆ ನಿನಗೆ
ದೊರೆವ ಸನ್ಮುಕ್ತಿ!
ದಾರಿ ನಡೆ ಇಬ್ಬದಿಯ
ಅಡವಿಗಳ ದಾಟಿ
ಮೌನ ಆನಂದಗಳ
ತವರೂರ ದಾಟಿ.
ನೋಡದೋ ನೋಡಲ್ಲಿ
ಹರಿವೊಂದು ಹೊನಲ,
ಕಾಡಮಧ್ಯದಿ ಹರಿವ
ನದಿಯಿದುವೆ ಯಮುನೆ!
ಬಿಸಿಲ ಬೇಗೆಯಿನಾಕೆ
ಕಂದಿ ಕುಂದಿಹಳು;
ಮೋಹನನ ನಾಡಿಗೆದೆ
ಹಾದಿಮಾಡಿಹಳು!
ಯಮುನೆಯಲಿ ಮಿಂದು, ನಿ
ರ್ಮಲನಾಗಿ ಮುಂದು,
ಯಮುನೆ ಬಲತಡಿಯ ನೀ
ಸೇರುತಲಿ ನಿಂದು,
ದುಡುಕದೆಯೆ, ದುಡುಕದೆಯೆ
ನೋಡು ನೋಟಗಳ
ಅಡವಿ ಮನೆಮಾಡಿದಾ
ಗೊಲ್ಲನಾಟಗಳ!

೪

ಪುಳಿನ ರಾಶಿಯೊಳಲ್ಲಿ
ಕುಳಿತು ಕೊಳಲೂದಿ,
ಚೆಲುವೆ ರಾಧೆಯ ಎದೆಯ
ನರಳಿಸುವನಲ್ಲಿ.
ಹಗಲಿರುಳ ತಾಳಗಳ

ಹಿಗ್ಗಿದು ಒಡಿಬಡಿದು,
ಜನನಮರಣಗಳೆಂಬ
ನಟರ ಕುಣಿಸುವನು!
ದೂರ ತೀರದಿನೆನಿತೊ
ಕರೆಯ ಕೇಳುವನು,
ಧಾರಿಣಿಯನೆಲ್ಲವ
ಲ್ಲಿಂದಲಾಳುವನು.
ಉಟ್ಟ ಪೀತಾಂಬರದ
ಆಸನವ ಹಾಸಿ,
ಸಿಟ್ಟುಸಿರ ಪರಿಮಳದ
ಗಾಳಿಯನೆ ಬೀಸಿ,
ಕಂಪುಗುವ ಚುಂಬನದ
ಹೂವುಗಳ ಮುಡಿಸಿ,
ತಂಪಿಡಿದ ತನ್ನೆದೆಯ
ನವನೆದುರೆ ಬಿಡಿಸಿ.
ಮಧುರಾಧರಾಮೃತ ನಿ
ವೇದನೆಯ ಮಾಡಿ,
ಎದೆಯ ಪ್ರೇಮಜ್ಯೋತಿ
ದೀಪವನೆ ಹೂಡಿ.
ಅಲ್ಲಿ ಆ ರಾಧೆ ಆ
ರಾಧಿಸುವಳವನ
ಆನಂದಬಾಷ್ಪ ಧಾ
ರಾಭಿಷೇಕದಲಿ!

## ೧೧. ಎಂತಿಹನೊ—ಎಲ್ಲಿರುವನೊ

ಎಳೆದಳಿರಿನ ಪಸದನಗಳ ಮರ್ಮರ ದನಿಯನು ಮಾಡುತ
ತಿಳಿನೀರಿನ ಕಾಳ್ಪುರದಲಿ ಮೆಲುದನಿಗಳ ಪದ ಹಾಡುತ
ತಂಬೆಲರೊಳು ಸುಯ್ಯೆಂಬುವ ಸಂದೇಶವಸಿರದಟ್ಟುತ
ಕಣ್ಣಿಗೆ ಕಾಣಿಸದಂತೆಯೆ ತನ್ನಯ ನೆನಹನೆ ಕೊಡುವನು.

ತಂಗಾಳಿಯ ಸುಣ್ದುಟಿಯಿಂ ಬೆಳ್ದಿಂಗಳ ಚುಂಬಿಸುತಲಿ
ತಂಗದಿರನ ಸಿಳ್ನೋಟದಿನಿಂಗಡಲನೆ ಬಿಡುದುಕ್ಕಿಸಿ
ತುಂಬಿಯ ಬಂಬಲವೆಂಬುವ ಶ್ರುತಿಯೊಳು ಸರವೊಂದಾಗಿಸಿ
ಕಣ್ಣಿಗೆ ಕಾಣಿಸದಂತೆಯೆ ತನ್ನಯ ನೆನಹನೆ ಕೊಡುವನು.

ಕಾರಿರುಳಿನ ಕಾರ್ಮೋಡದ ಗುಹೆಯೊಳು ತಾನಡಗಿರುತಲಿ
ಕುಡಿಮಿಂಚಿನ ಕಿರುನಗೆಯಲಿ ಬಾಂದಳವನೆ ಬೆಳಕಾಗಿಸಿ
ಗುಡುಗಿನ ಬಲ್ದನಿಮಾಡುತಲಾಗಸದೊಳು ಬಿಡದಾಡುತ
ಕಣ್ಣಿಗೆ ಕಾಣಿಸದಂತೆಯೆ ತನ್ನಯ ನೆನಹನೆ ಕೊಡುವನು.

ಮುಂಜಾವಿನ ಮುಂಬೆಳಕಿನೊಳರುಣ ಧ್ವಜವನ್ನೆತ್ತುತ
ಪೊಂಗದಿರನ ಬರಸಾರುತಲಿಳೆಯನು ಬೆಳಕಿನ ಕಡಲೊಳು
ಮುಳುಗಿಸುತಲಿ ಮೂಡಣ ಬೆಟ್ಟದ ತಪ್ಪಲ ಹಿಂಬದಿಯಲಿ
ಕಣ್ಣಿಗೆ ಕಾಣಿಸದಂತೆಯೆ ತನ್ನಯ ನೆನಹನೆ ಕೊಡುವನು.

## ೧೨. ಗುರುದೇವ*

ನೀನಲ್ಲದಾರುಂಟು ಗತಿಯೆನಗೆ ಗುರುದೇವ
ನೀನೆ ಸರ್ವಸ್ವವೆನಗೆ, ನೀನೆ ಸರ್ವಸ್ವವೆನಗೆ!

ಹೆತ್ತ ತಾಯಿಯು ನೀನೆ, ಹೊತ್ತ ತಂದೆಯು ನೀನೆ,
ಮತ್ತೆನಗೆ ನೆರವಾದ ಬಂಧು ನೀನೆ!
ಉತ್ತಮೋತ್ತಮನಾದ ಸದ್ಗುರುವು ನೀನೆನಗೆ,
ನಿತ್ಯಾತ್ಮ ನಿರ್ಮಲಾನಂದ ನಿಧಿಯೇ!

ಪ್ರಣವ ಮಂತ್ರದ ಮೂಲವರುಹಿದವ ನೀನೆನಗೆ,
ಪ್ರಣುತ ಶಾಸ್ತ್ರದ ಸಾರ ಸವಿಯಲೆರೆದೆ;
ವಿನುತ ಪ್ರಾಣಾಯಾಮದಿಂದಲೀ ತನುಮನವ
ಮಣಿಸಿದಾ ಪ್ರಣವ ಸ್ವರೂಪ ನೀನೇ!

ನೂರಾರು ಚಿಂತೆಗಳ ನೂರಾರು ದಿಕ್ಕಿಗೆ
ತೂರಿಕೊಟ್ಟವೀ ಬ್ರಹ್ಮಾಂಡ ಕೋಟಿಗಳ
ತೋರುತೆನ್ನೀ ಮನೋನೇತ್ರಕದ್ವೈತದ ಆ
ನಾರತೆಯ ದಿವ್ಯದರ್ಶನವನಿತ್ತೆ!

---

* 1935ರಲ್ಲಿ ಕವಿ ಗದುಗಿನ ಸಮೀಪದ ಕಪೋತಗಿರಿಯಲ್ಲಿ ಗುಹಾವಾಸಿಯಾಗಿದ್ದಾಗ ತೋರಿ ತೊಬ್ಬ ಸದ್ಗುರುವಿಗೆ.

## ೧೩. ನೀತಿ

ಕಡಲ ತೆರೆಯಿಂದೊಗೆವ ಸಂಗೀತ ಸರಸತೆಯ
ಜಡವಾದ ಮಳಲೊಟ್ಟಿಲಳೆವುದೆಂತೊ?
ತಳಿರಿಡಿದ ಮಾಮರದಿನುಲಿವ ಕೋಗಿಲೆಸರವ
ಬಳಿಯ ಹಳುಬಳಗವದು ಸವಿವುದೆಂತೊ?
ಮಲ್ಲಿಗೆಯ ಮಲರ ತನಿಗಂಪು ಗಾಳಿಯಲಳಿಯೆ
ಹುಲ್ಲುದರ ಹೆಚ್ಚಳವನರಿವುದೆಂತೊ?
ಕೊಳೆತಡಿಯ ಪುಳಿನದಲಿ ತೆಳುವಾಗಿ ಪಡಿನೆಳಲ
ತಳಿವ ತಿಂಗಳ "ಜಡತೆ"ನೋಳ್ಪುದೆಂತೊ?
ಹೊಳೆಯುವಾಗಸದೊಳಗೆ ಸುಳಿವ ಮೆಲ್ಲೆಲರಿನಲಿ
ತಿಳಿಯಾದ ಸಂಗೀತ ಅಲೆಗಳೊಲಿಯೆ,
ಆರ ನುಡಿ ಆ ಕವನ? ಆರ ಕೊಳಲಿನ ಜೀವ?
ತೋರಿ ಸಾರದ ಅದರನರಿವುದೆಂತೊ?
ಹೊಳೆವ ತಾರಗೆಯೊಳಗೆ, ಬಿರಿವ ಕಿರಿಮುಗುಳೊಳಗೆ,
ಇಹುದೊಂದು "ತತ್ವ"ವೆಂಬರಿವು ಬಹುದು;
ಇಳೆಯನಾವರಿಸಿರುವದೊಂದು ಕಳೆ ಆ ತತ್ವ;
ವಿಹಿತಜೀವನದೊಳಗೆ ಅಡಗಿ ಇಹುದು.
ಕೊಳಲೆಂದು ನೇಹಹಿಡಿತದಿ ಅದರನೊಪ್ಪಿಸಲು,
ತಳುವದೇ ಮನದೊಳದನೊಪ್ಪಿಕೊಳಲು,
ಗಳಿಗಬಟ್ಟಲು ಬಾಳ್ವೆ ಇಹುದೊಂದು ಹಿಡಿತದಲಿ,
ತಿಳಿವಹುದು ಬಿಗಿತವದೆ "ನೀತಿ" ಎಂದು.

## ೧೪. ಮಾಯೆ

'ಮಾಯೆ', 'ಮಾಯೆ' ಎಂದು ತಳುವದೆ ನುಡಿವರು,
ಕಾಯಕ್ಲೇಶವನು ಮುಳಿಯುತ ಹಳಿವರು.
ಹೇಯ ಕರ್ಮಗಳ ತುಳಿಯದೆ ನಡೆವರು
ಮಾಯೆ ಇದಾವುದಹೊ?

ಗಾಳಿಯೊಳುಲಿಯುವ ಸಂತಸ ಸವಿಯರು,
ಸಾಲುತಾರೆಗಳ ತತ್ತ್ವವ ತಿಳಿಯರು,
ಕೋಲುಮಿಂಚು ಹರಿನಗೆ ಎಂಬುದರಿಯರು.
ಮಾಯೆ ಇದಾವುದಹೊ?

ಜನರೊಳು ಹೊಳೆಯುವ ದೇವನ ನೋಡರು,
ನನೆಯಾದ ತನುವಿದು ಮುಗಿವುದ ಕಾಣರು,
ಘನತೆಯ ಗಿರಿಯಿಂದ ಬೀಳ್ವುದ ಒಗೆಯರು,
ಮಾಯೆ ಇದಾವುದಹೊ!

ನಾನು, ನನ್ನದಿದು ಎಂಬುದೆ ಮಾಯೆಯು,
ನೀನು, ನಿನ್ನದಿದು ಎಂಬುದೆ ಸತ್ಯವು,
ಮಾನಿತ ಭಕ್ತರ ತತ್ತ್ವವಿದರಿಯರು,
ಮಾಯೆ ಇದಾವುದಹೊ!

## ೧೫. ಕಡೆನುಡಿ

ಅಳಲದಿರು ನಾನಿಂದು ಪೋಪೆನೆಂಬುದಕಾಗಿ
ಬಳಲದಿರು ಬಾಡುವೆಳಲತಿಕೆಯಂತೆ;
ಕಳವಳದ ಕಂಬನಿಯ ತುಂಬಿ ಹಂಬಲಿಸದಿರು
ಇಳೆಯೊಳಿಳ್ತಿಯ ಮಾತು ಮುಗಿದುದೆಂದು.

ಅದೊ, ನೋಡು, ಮೃತ್ಯು ದೂತಂ ಬಂದು ನಿಂದಿಹನು,
ಅದಿರದಿರು ಮೃತ್ಯು ಲೋಕಕ್ಕೆಂಬನು;
ಬೆದರಿಕೆಯನರಿತಿಲ್ಲ ಬಾಳಿನಲಿ ನಾನದರಿ
ನೊದಗಿದಾಮಂತ್ರಣವ ಕೈಕೊಂಬೆನು!

ಏತಕೀ ನೀರವದ ರೋದನಂ, ನೀಳ್ನೋಟ
ದಾತುರದ ಮಾಳ್ಕೆ, ಕೃಶದೇಹದೊದವು?
ಪೂತ ಪ್ರಭಾವತಿಯೆ, ಸಾಕು ನಿನ್ನೀ ಶೋಕ
ದಾರ್ತ ಪ್ರಕಂಪನಂ ಮೃತ್ಯುವನಕೊ!

ತಳುವು, ತಳುವೆಲೆ ಮೃತ್ಯು! ಕಾಮಿನಿಯ ಬೆಂದೆದೆಗೆ
ತಿಳಿವೆಂಬ ತಂಬನಿಯ ಸೂಸಿ ಬರುವೆಂ;
ಹಲರುಂಟು ಧಾರಿಣಿಯೊಳಿನಿತೊಂದು ತಳ್ತಳಲ
ನೆಳಲ ನಿಟ್ಟಿಸಿ ನೊಂದು ನುಡಿಯುವವರು!

ತಳುವು, ತಳುವೆಲೆ ಮೃತ್ಯು! ಕಾಮಿನಿಯ ಚೆಂದುಟಿಗೆ
ನಲವಿಂದ ಚುಂಬನವನಿತ್ತು ಬರುವೆಂ;
ಹಲರುಂಟು ಧಾರಿಣಿಯೊಳಿನಿತೊಂದು ನಲ್ಮೆಯಲಿ
ನಲಿದು ನೋವಂ ಮರೆದು ನುಡಿಯುವವರು!

ಇಂದಿಗಾದುದು ನಿನ್ನ ಮಾಂಗಲ್ಯ ನಾಟಕದ
ಸಂಧಿ, ಸುಖಶಾಂತಿ ಸಂಪದವಳಿದುದು;
ಇಂದಿಗಾದುದು ಎನ್ನ ಸಿಂಗರದೊಳಿನಿಯಾಸೆ
ಬಂಧನಂ, ಬಾಳ ಹಂಬಲ ಹರಿದುದು!

ಇನಿತೊಂದು ಕಂಬನಿಯಿನಿನಿತೊಂದು ನಿಟ್ಟುಸಿರಿ
ನಿನಿತು ತಪ್ಪಗುವುದಲ್ತು ಬಾಳ್ಕೆ ಇದಕೆ!
ಇನಿಯೆ ನೀ ಮರುಗದಿರು, ಕೊರಗದಿರು ಈ ಮಳಲ
ಮನೆಗಾಗಿ, ಅಳಿವಿಲ್ಲ ಆತ್ಮವಿದಕೆ!

ಅರಳುವುದು, ಹೊರಳುವುದು ಎಲರೊಳಗೆ ಕಂಪಿತ್ತು
ಸುರುಳುವುದು ಕೊನೆಗದುವೆ ಕುಸುಮ ಧರ್ಮಂ;
ತರಳೆ ನೋವಿನೊಳೊಂದು ನಲ್ಮೆಯಂ ಕಾಣುವುದೆ
ಅರಿವರ್ಗೆ ಪರಸುಖವನೀವ ಕರ್ಮಂ!

* * * *

ಎದೆಯ ಕರಗಿಸಿ, ಕಣ್ಣ ನೀರಧಾರೆಯ ಸುರಿಸಿ,
ಬದುಕಿನಸಕ್ತಿಯನಳಿಸಿ, ಬಾಳ ಹಳಿಸಿ,
ಚತುರೆಯೊರ್ವಳ ಬಾಳಿನಂಧಕಾರದಿ ನೂಂಕಿ
ಚೆನರಿತತ್ತಿಂತೊಂದು ಹರಯದುಸಿರು!

## ೧೬. ಆಸೆ

ಆಸೆಗಾಯಾಸವಿಲ್ಲ, ತುದಿಮೊದಲ ಮಿತಿಯಿಲ್ಲ,
ಮೂಲೋಕಗಳನೊಂದೆ ನಿಮಿಷದಲಿ ಸುತ್ತಿ,
ಕೋಟಿ ಸೂರ್ಯರನೆತ್ತಿ, ಸೃಷ್ಟಿಕೋಟಿಯ ಬಿತ್ತಿ,
ಚಿರಯೌವನವನಾಂತು ನಿಂತುದಚ್ಚರಿಯಲ್ಲ!

ಭೂಲೋಕದಮಿತ ಸೌಂದರ್ಯರಾಶಿಯ ಸವಿದು,
ರಾಜರಾಜೇಶ್ವರರ ಸಿಂಹವಿಷ್ಟರವೇರಿ,
ವಿಪುಲ ಧನಕನಕ ಭಂಡಾರ ಸಾರವ ಹೀರಿ
ಹೃದಯಾಂಬುಧಿಯ ತೆರೆಯ ಮರೆಯೊಳವಿತಿದೆ ನವೆದು!

## ೧೨. ಸೆರಾತ್ರೆ

ಆವ ಹಾಲಾಹಲವನೀಂಟಿದೆನೊ, ಅಲ್ಲದಡೆ
ದೇವ ನನ್ನೆದೆಯೊಳೀ ಪರಿಯ ದಳ್ಳುರಿಯೆ?

ಎದೆಯ ಕತ್ತಲ ಕಾಡೊಳುರಿಯುವೀ ಕಾಳ್ಗಿಚ್ಚು
ಬದುಕಿನಾನಂದಗಳ ಸುಡುತ ಬರುತಿಹುದು.
ಬಗೆ ಬಾನ ಬೆಳ್ಳಿ ಮಬ್ಬಿನಲಿ ಮರೆಯಾಗಿಹುದು.
ಬಿಗಿದು ಬೆಂಬಳಿವುದಳಿಗೆಯ್ತುಗಳ ನೆಳಲು!

ನೂರಾರು ಆಸೆಗಳನಾಹುತಿಯಗೊಂಡಗ್ನಿ
ನೂರಾರು ನಾಲಗೆಯನೆತ್ತಿ ಹೊತ್ತಿ,
ಪ್ರಳಯ ಯಜ್ಞೇಶ್ವರನ ಕೆಂಗಿಡಿಯ ಕೊನೆಮುಟ್ಟಿ,
ತಳವರಿಸಿ ತಂಗಿತೆನ್ನೆದೆಯನೊತ್ತಿ!

ಬಲ್ಗರೆಯ ಘೋರ್ಗರೆಯೊ? ಸಿಡಿಲ ಸಿಂಹಧ್ವನಿಯೊ?
ಕತ್ತಲೆಯ ಮೃತ್ಯು ಮೌನಚ್ಛಾಯೆಯೊ?
ನಡುಗುತಿದೆಯಂಗಾಂಗ. ಹೃದಯ ಹಮ್ಮೈಸುತಿದೆ.
ತಡೆವುದೆಂತೋ ಕಾಣೆನೀ ರೌದ್ರವ!

## ೧೮. ವಿಧಿಗೆ*

ನಿನ್ನನೇತಕೆ ವಿಧಿಯೆ, ಬರಿದೆ ಕಾಡಿಸುವೆ?
ಇದೊ ಕೊಟ್ಟೆನಿದೊ ಬಿಟ್ಟೆನೆಂದು ಪೀಡಿಸುವೆ!
ನಳ, ಹರಿಶ್ಚಂದ್ರ, ರಿಪುದಮನ, ಧರ್ಮರಾಜರು,
ಕಾದಿ, ಗೆಲಲರಿಯದೆಯೆ ಸೋಲನೊಪ್ಪಿದರು!
ಅಂದಿನೊಲು ನೀನಿಂದುಮಜಿತನಾಗಿರುವೆ.
ಅಂದಿನಂದದಿನಿಂದು ಹಸಿದೆ ನಿಂದಿರುವೆ!
ಏನಿದದ್ಭುತಕಾಯ, ವಿಧಿ, ನಿನ್ನ ಮಾಯ!
ಸೃಷ್ಟಿಕೋಟಿಗಳ ತುತ್ತುವ ನಿನ್ನುಪಾಯ!
ಗಂಭೀರ ಸಾಗರ, ಅನಂತ ಗಗನಗಳ,
ರವಿ ಶಶಿ ಗ್ರಹ ತಾರೆ ಕೋಟಿಕೋಟಿಗಳ
ಒಂದೆ ನೋಟದಿ ನೋಡಿ, ಒಂದೆ ತುತ್ತಾಗಿ
ನುಂಗುವಬ್ಬರವೇನೊ! ಎಲೆ ರುದ್ರ ಭೋಗಿ!

---

* ಶ್ರೀಮಾನ್ ಗೋವಿಂದ ಪೈಗಳ ‘ಗಿಳಿವಿಂಡಿ’ನ ಒಂದು ಪದ್ಯದ ಮೊದಲ ಸಾಲಿಂದ ಪ್ರೇರಿತವಾದದ್ದು.

## ೧೮. ಮಧುಮಾಸದುದಯ

೧

ಮಧುಮಾಸದುದಯದಲಿ
  ಮಧುರ ಮಧುಗೀತಂ,
ಯೌವನದ ಪಾತ್ರೆಯಲಿ
  ಪ್ರೇಮ ಸಂಗೀತಂ.

೨

ಮಲ್ಲಿಗೆಯ ಮೊಗ್ಗೆಯಲಿ
  ಮಕರಂದ ಪಾನಂ,
ಸಲ್ಲಳಾ ಬಾಯ್ದೆರೆಯೊ
  ಳಮೃತಮಯ ಗಾನಂ.

೩

ಬಾಂದಳದಿ ಬೆಳ್ಮುಗಿಲ
  ಸಲ್ಮೆ ನಲಿದಾಟಂ,
ಕವಿಯ ಬಗೆಯಗಲದಲಿ
  ಭಾವನೆಗಳೋಟಂ.

## ೨೦. ಸುಮ್ಮನಿಹುದೇಕೆ

ಎಳದಳಿರುಗಳ ತಿಂಪು,
ಬೆಳುದಿಂಗಳಂ ಕೂಡಿದು
ಉಲಿಯ ಸಲುಮೆಯಿನೆನಿತೊ
    ಪಕ್ಷಿಯುಗಳ
ಬಳಿಯ ಮಾಮರದಲ್ಲಿ
ಕೆಳೆಯಲೆಳಸುತಲಿಹವು,
ಎಲರೊಳಗೆ ಪ್ರಣಯ ಪರಿ
    ಮಳಿಸುತಿಹುದು.

ಮಧುಮಾಸ ಬಂದಿಹುದು.
ಮಧುಧಾರೆ ತುಂಬಿಹುದು.
ಮಧುರ ಮೌನದಿ ಪ್ರೇಮ
    ಯಮುನೆ ಹರಿದಿಹುದು.
ಹದಗೆಟ್ಟು ಮೇದಿನಿಗೆ
ವಿಧಿ ಸೊಬಗನಿತ್ತಿಹನು.
ಇದನು ನಾವರಿತಿರಲು
    ಸುಮ್ಮನಿಹುದೇಕೆ?

## ೨೧. ರಸಲೀಲೆ

ನೀರನೀರೆಯರೆಲ್ಲ ಬನ್ನಿ ಹೂದೋಟಕೆ
ಮಧುನೃಪ ಚದುರ ಬಂದಿಹನು!
ಸಾರಸ ಕುಸುಮ ಸಂಕುಲ ಸುವಾಸಿತ ವಾತ
ತೇರು, ತೇರೇರಿ ಬಂದಿಹನು.

ಹಜ್ಜೆ ಹಜ್ಜೆಯನಿಟ್ಟು, ಚೆಲ್ವಿನ ಮೈಬಿಟ್ಟು,
ತೋಳುತೋಳಿಂದೆದೆದೊಟ್ಟು,
ಸಜ್ಜೆಯ ಬಿಜ್ಜೆಯ ಬಲ್ಲ ಬಲ್ಲಿದರೆಲ್ಲ
ಬನ್ನಿ ಸಿಂಗರಕೆದೆಗೊಟ್ಟು.

ಮುದ್ದುಮುದ್ದಾಡುತ ಮಧುರ ಚುಂಬನದಿಂದ
ರಾಗದೆದೆಯ ರಸ ಸವಿದು,
ಸಿದ್ಧರು, ಪ್ರಣಯ ಪ್ರಸಿದ್ಧರು ನಾವೆಂದು,
ಆಡುವ, ರಸಲೀಲೆಯಹುದು.

## ೧೭. ರಾಗ

ವಸಂತದೊಂದು ಸುಪ್ರಭಾತ
ಸುಂದರ ಸುಮನೋಜ್ಞಹಾಸ
ಸುರುಚಿರ ಸುಮಸುರಭಿವಾತ
ಅದರೊಳೊಂದು ಮಧುರಗೀತ
ವಿಶ್ವಕರ್ತನವನ ರಾಗ.

ವಿಶ್ವವೆಲ್ಲವೊಂದು ಮುರಲಿ
ಶೀತವಾತ ಶ್ವಾಸಲಹರಿ
ಜೀವಕೋಟಿ ಅದರೊಳುರುಳಿ
ಹೃದಯನಾದಗಳನು ಮರಳಿ
ಪಡೆವುದದುವೆ ಅವನ ರಾಗ.

ಕಡಲಿನೊಗೆವ ಮೃದುಲ ರವವು
ಬಾನಿನುಲಿವ ಮೇಘನಾದ
ನದಿಯ ಮಂದ ಮಧುರ ಗಾನ
ಅವುಗಳೊಳಗೆ ಕವನಜವವು
ಹರಿವುದೊಂದು ಹರಿಯ ರಾಗ.

## ೨೩. ಉಷೆ

ಮೂಡಲ ಬಾನಿನ ಬಾಗಿಲ್ದೆರೆಯಿತು,
ಹಾಡಿದುವೈ ಹೂ ಪರಿಮಳವ.
ಹಾಡಿದ ಹೂಗಳ ಪರಿಮಳ ಗೀತದ
ಕೋಡಿವರಿದುದೈ ತಂಬೆಲರ.

ಚಿಗುರಿನ ರಾಗವನಿಂಟುತಲಾವಳೊ
ಮೊಗದಲಿ ಶುಭ್ರತೆಯಾಂತಿಹಳು.
ಮುಗುಳಿನ ಮೆಲ್ಲುಸಿರೂದುತಲರಳಿದ
ಮೊಗದಿಂದಿಳೆಯಂ ನೋಡುವಳು.

ಹೊಳೆಯುವ ಪಳುಕಿನ ತೆರದಿಂದೆಸೆಯುವ
ಬಾಂದಳವಾಕೆಯ ಸುಣ್ಣದವು,
ತಿಳಿಯಾದೀ ಕೊಳ ನೀರಾಕೆಯ ಪಡಿ
ನೆಳಲಿಪ ಕೈಗನ್ನಡಿ ಪೊಳವು.

ಮೂಡಲ ಬೆಟ್ಟದ ತಪ್ಪಲ ತೋಟದ
ತಾರಾಸುಮಗಳ ಕುಯ್ದಿಹಳು.
ಆಡುತಲೋಡುತಲಂಬರ ಪಟದಲಿ
ಮಂದಸ್ಮಿತವನೆ ಸೆಯ್ದಿಹಳು.

ಹಾಡುವ ಹಕ್ಕಿಯ ಗೂಡಿಂದೆಬ್ಬಿಸಿ
ಗಾಳಿಯ ಪಟದವೊಲಟ್ಟಿಹಳು;
ನೋಡದೊ ಮಂಜಿನ ಮಣಿಗಳ ಹಾರವ
ಕೋದು ಕೊರಲಿನೊಳು ತೊಟ್ಟಿಹಳು!

ಹೊದೆದಿಹ ಕತ್ತಲ ಮುಸುಕಂ ತೆಗೆಯುತ
ರವಿಯನ್ನೆಬ್ಬಿಸಿ ಕರೆದಿಹಳು,
ಬಿದಿ ಮಾಡಿದ ವೈಚಿತ್ರ್ಯದ ಪಟಗಳ
ನೊಂದೊಂದಾಗಿಯೆ ತೆರೆದಿಹಳು.

ತಳಿರಿನ ಮೆಲ್ಲಡಿ.ಇಡುತಲಿ ಉಷೆ ತಾ
ನಿಳೆಗಾನಂದದಿ ಬರುತಿಹಳು;
ಎಳಮಕ್ಕಳ ಕಣ್ಣೆವೆಯಂ ತೆರೆಯಿಸಿ,
ಆಡಿಸಿ, ಹಾಡಿಸಿ ಬರುತಿಹಳು.

ಧರೆಯೆಂಬೀ ಪುಸ್ತಕವಂ ಬಿಚ್ಚುತ
ಹೂದಳಿರಿನ ಸವಿಗವನಗಳ
ಬರೆದಾ ಕವಿ ಜಾಣ್ಮೆಯ ಕೊಂಡಾಡುವ
ಕೋಗಿಲೆಯೆದೆಯಂ ಮಿಡಿದಿಹಳು.

ಕವಿಗಳ ಕಣ್ಣನು ತೆರೆಯಿಸಿ ತನ್ನನು
ಬಣ್ಣಿಸಿ, ಬಣ್ಣಿಸಿ ಕವಿತೆಗಳ
ಸುವಿಮಲ ಸುರಸ ಸ್ವನದ ಸುಧಾರಸ
ಸರಿಯಂ ಸೂಸುತ ಬರುತಿಹಳು!

## ೨೪. ಒಂದು ಪ್ರಾತಃಕಾಲ

ನೋಡು, ನೋಡು ಹೊಂಬಿಸಿಲಲಿ ಹಸಿಮಳೆ
ಹೊಳಲು ಗಾಳಿಯನು ಸೀಳುತಿದೆ,
ಮೂಡಲದಲಿ ಹೊನ್ನೇಸರ ಕೊಂಗಳೆ
ಎಳದಳಿರಲ್ಲುರಿದೇಳುತಿದೆ!

ಮಳೆಬಿಲ್ಲಿನ ಹೊಂಬಣ್ಣದ ಹೊಗರದೊ
ತಂಗೊಳದಲಿ ಪಡಿನೆಳಲಿಸಿದೆ!
ತಳಿರಿಂ ತುಂಬಿದ ಮಾವಿನ ಸೆಳೆಯಲಿ
ಕೋಗಿಲೆ ಕವನವನುಲಿಯುತಿದೆ!

ಮರಳೊಳಗೂಡಿದ ಈ ಕೊಳನೀರಲಿ
ಅರಸಂಚೆಗಳೀಸಾಡುತಿವೆ!
ಅರಳಿದ ಬಿಳಿ ಮುಗಿಲಾಗಸಕೆತ್ತಿದ
ಬೆಳ್ಗೊಡೆಯೊಲು ಕಂಗೊಳಿಸುತಿದೆ!

ದೂರದಿ ತೋರುವ ಶೈಲಾವಳಿಯಿಂ
ಹಾಲೆರೆದಂತಿಳಿವಾ ಹೊನಲು.
ಸಾರುವನುಣ್ದನಿ ಗೀತಾವಲಿ ತಂ
ಗಾಳಿಯ ಗಂಧದೊಳಾಡುತಿದೆ!

ಮೌನದ ಮಧುರಿಮೆಯೂಗುತ ಸೃಷ್ಟಿ
ಸ್ಮಿತಸುಮ ಸುರಭಿಯ ಸೂಸುತಿದೆ!
ಮೌನವೆ ಬಾಳ್ಕೆಯ ತುದಿಮೊದಲೆಂಬುವ
ಸುಂದರ ತತ್ವವ ಸಾರುತಿದೆ!

ಎನ್ನೆದೆಯೊಳಗಾನಂದದ ಬೆಳ್ಳಿಳ
ಕಾವರಿಸುತ ನಿರ್ಮಲ ಸುಖದ
ಬಣ್ಣದ ಕನಸುಗಳೆನಿತೋ ಬರೆದಿವೆ
ಕವಿತಾ ಮಾತೆಯ ತೊಡಲುಲಿಯ!

ಬಾರೆಲೆ ದಾರಿಗ! ಆವುದ ನೋಡದ
ಮುಡುಕಿನ ಪಯಣವು ಸಾಕಿನ್ನು!
ದೂರದ ತೀರದ ಸಂದೇಶವ ತಿಳಿ
ಬರೆದಿದೆ ಚಿಗುರಿನ ರಾಗದಲಿ!

ಒಂದೇ ನೋಟದಿ, ಒಂದೇ ಭಾವದಿ
ಒಂದೇಕಾಂತದ ಈ ತಿಳಿವ
ಇಂದೇ ತಿಳಿವಡೆ ಸತ್ಕವಿ ಸಖ್ಯವ
ನಿಂದೇ ಬೆಳಸೈ ದಾರಿಗ ನೀ!

## ೨೫. ಮಳೆಹನಿ

ತಂಬೆಲರ ಸೋಂಕಿನಿಂದುಂಬಿ ಮುಗಿಲೋಳಿಯಿಂ
ಚೆಂಬಿಸಿಲ ನೀಳಿಬಹ ಮಳೆಯ ಹನಿಯೆ!
ಪಿಂಚೇಸಗೆಯ ಮುಗುಳ್ನಗೆಯ ಹೊಂಬೆಳಗಿನಲಿ
ಹಂಬಲಿದ ತುಯ್ಯಲಂ ಹಾಡುತಿಹೆಯಾ?
ಬೆಂದೆದೆಗೆ ತಂಬನಿಯ ತಂದೀವರಾರೆಂದು
ಚೆಂದಳಿರು, ಸುಮತತಿಗಳೆಲ್ಲ ನಿಂದು,
ಮೋನವಾಂತನಿತು ನಿಟ್ಟಿಸಲು ಬಾಂದಳವಸದೊ
ಗಾನದೊಲು ಮೆಲ್ನಡೆಯಿನೈದಿ ಮುಗಿಲು,
ಮಳೆಯ ಮಧುಬಿಂದುಗಳ ತಳಿದುದುದ್ಯಾನದಲಿ.
ನಿಲುವೆಲರಿನಲರುಗಳನರಳಿಸಿದುದು;
ಸಲಿಗೆಯಿಂದೆನ್ನ ಹೃಚ್ಚಾತಕವನೊಲಿಸಿದುದು;
ಬಳಲಿಕೆಯ ನೆಳಲನಿರದಳಿಸಿದುದು.
ನೀಲಾಂಬರಾಂಬುಧಿಯ ಮೌಕ್ತಿಕ ಮರೀಚಿಗಳೆ!
ಕಾಲನಾನಂದಾಶ್ರು ಶುಭ್ರ ಬಿಂದುಗಳೆ!
ತಳಿರಿಡಿದ ಭೂಮಾತೆಯೊಲಿಯಲೆಂದೊಪ್ಪಿಸಿದ
ಅಲರ ಸಂಚಯಮಲ್ತೆ ಮಳೆಯ ಹನಿಯೆ!

## ೨೬. ಮಳೆಮುಗಿಲ ತಾರೆಗಳು

ಕಾರಿರುಳ ಬಾಂದಳದಿ ಬೆಳಕು ಬಲ್ದೆರೆಪರಿಯು
ಲೋರ್ವೆಸಿ ಗೋಚರಿಸಿತೊಂದು ಮೇಘಂ;
ಸಾರಿರುವ ಕತ್ತಲೆಯ ಪಾಳಯದ ಕೊತ್ತಲಂ
ಬೀರುತಿದೆ ಕಿಡಿಯೊಂದು ಹೊಳೆವ ಸರಲಂ.

ಕೊಳದ ನೈದಿಲೆಯವೊಲು ದಳವನಗಲಿಸಿ ಮೋಡ
ಎಳೆಮಿಂಚ ರೋಚಿಯೊಳು ಅಲುಗುತಿಹುದು.
ನಲಿವ ಮುಗುದೆಯ ಮುಡಿಯ ಕುಸುಮಹಾರಗಳಂತೆ
ಬೆಳಗುತಿವೆ ತಾರೆಗಳು ಮುಗಿಲ ಮಲೆಯೊಳ್.

ನೀಲನೀರದವೆಂಬ ಹರ್ಮ್ಯ ವಿದ್ಯುದ್ದೀಪ
ಮಾಲೆಯೊಲ್ ಪೊಳೆವ ನಕ್ಷತ್ರನಿಚಯಂ
ಗಾಳಿಯುನ್ನೋಲೈಪ ಸುರಭಿಸಲ್ಲೋಭಸದ
ಲೀಲೆಯಿಂದುಗುವ ಪಾಟಲವದೆನಿಕುಂ.

ಬೀಸುವೀ ಬಿರುಗಾಳಿ ಎಸ್ನಂಗಳೆದ ಲತೆಯು
ನೋಸರಿಸದೊಪ್ಪಿರುವ ಕುಸುಮಕುಲವ
ಸೋಸಿ ಸೊರಗಿಸಿತು; ಎಳ್ಚರಿಪೆನದುಕತದಿ — "ತವ
ಹಾಸದೆಸಕವನಾದು ನಲಿಯಬೇಡ!"
ಎನಿತೊ ಸುಗ್ಗಿಯ ಸೊಗದಿ ನಗುವ ಹೂಗಳ ಕಂಡು.
"ಮಿನುಗುವಿರ? ಮುನ್ನುಂಟು ಮುಗಿವು ನಿಮಗೆ"
ಇನಿತೊಂದು ಪಲ್ಲವಿಯನಾ ವಸಂತಾಗಮದೊ
ಳಾನಿಸುತ ನಾಣೆಸಿದೆ ನನೆಗಳನಿತಂ!
ಇಂದಿನೀ ನಿಶಿಯ ನೀರವದಲ್ಲಿ ನಿಮಗದಾ
ನೊಂದು ಸಂಗೀತಸಲ್ಲಾಪವೀವೆಂ—
"ಸುಂದರಾಕೃತಿಯೊಡನೆ ಸೌಮ್ಯತೆಯ ನಿಚ್ಚಲುಂ
ಒಂದಿಸಿರ! ನಿಮಗಳಿವು ಬಾರದಿಹುದು."
ವನದೆಲರು ಪರಿಮಳವ ಸೂರಗೈಯಲೆ ಅಲರೊ
ಳನುಕಂಪಕಣವನಿನಿಸುಂ ತಳೆಯದೆ?
ಜಿನುಗುವಾನಂದಾಶ್ರು ಪುಲಕದಿಂದೆಳ್ಚಿಸು
ತ್ತನುಗೊಳಿಸಿರಾ ಸಮೀರನ ಕೂರ್ಮೆಯಿಂ.

ಇದಕೊ ಸವಾನಿಲ್ಲ.ಸಂಚಲಿಸಲಿ ಮೃದು
ಪದಗತಿಯಿಂ ತಳಿರಿಸೆ ಲತೆಯಂ,
ಕುಮುರಿಸೆ ಕೋಮಲ ಕಿಸಲಯದಿಂ ಮುಗು
ಳಿದೆಯಲಿ ಸೌಗಂಧದ ವ್ಯಥೆಯಂ!

## ೨೭. ಒಂದು ಸಂಜೆ

ಕತ್ತಲಿಸಿತಲ್ಲಿ ಪಡುವಲ ಚಕ್ರವಾಳಂ
ಬಿತ್ತರಿಸಿ ಘೋರ್ಗರೆವುದೀ ನೀಲಿಯಾಳಂ!

ಹಗಲುರಿಯು ತಂಪಾಯ್ತು ತಂಗಾಳಿಯಲ್ಲಿ,
ಮುಗಿಲ ನಗೆ ಮುಗುಳಾಯ್ತು ಸಿಂಗಾರದಲ್ಲಿ.

ನೀರೆ, ಬಿಡು, ಬಿಡು ಕರವನೆದೆಯ ಕತ್ತಲೆಯ
ತೂರುವೊಲು ತೋರು ನಿನ್ನೆಳನಗೆಯ ಕಲೆಯ

ಈ ಮಳಲ ರಾಶಿಯಲಿ ನಲಿವ ನೊರೆಯಂತೆ
ಕಾಮಿಗಳ ಕಾಣ್ಕೆ ಕಂಗೊಳಿಸುತಿಹುದಂತೆ!

ಬಾರೆಂದು ನೀನೆನ್ನ ಕರೆವೆಯಾ ಮನೆಗೆ?
ನೀರೆ, ಮನೆಮಠವೆಂಬುವಿನಿಸಿಲ್ಲ ವೆನಗೆ!

ಮರುಕದಾಗರದಲ್ಲಿ ಕಣ್ಣೀರ ಕರೆದು
ಉರಿವಳಲ ಹೆಚ್ಚಿಸುವ ಬಿರುಗತೆಯನೊರೆದು,

ಕೇರಿಕೇರಿಗಳಲ್ಲಿ ದುಃಖಕೇತನವ
ಊರಲೆಂದೊತ್ತರಿಪುದೇಕೆನ್ನ ಮನವ?

ಕಂಡಾಯ್ತು, ಉಂಡಾಯ್ತು ಹೊಳಲಳಲ ಹೊರೆಯು
ಭಂಡಾರವಂತೆಲ್ಲ ಬರಿದಾದುದರಿಯಾ?

## ೨೮. ಸಂಜೆ ಬಂತು

೧

ಸಂಜೆ ಬಂತು, ಸಂಜೆ ಬಂತು,
ಮುಗಿಲ ಕದವ ತೆರೆದು ಬಂತು,
ಕಡಲ ಕರೆಯ ತೊರೆದು ಬಂತು
ಹೊಳಲ ಮಧ್ಯಕೆ—
ಉಡುಗಳಡಿಯನಿಡುತ ಬಂತು
ಗಗನ ಮಧ್ಯಕೆ.

೨

ಹೊಳಲ ಹೂವ ಮುಗಿಸಿ ಬಂತು,
ಬಾನಿನಲರ ನಗಿಸಿ ಬಂತು,
ಕೊಳಲ ಕರೆಯ ಕೇಳಿ ಬಂತು
ಚೆಲುವ ಹಳ್ಳಿಗೆ—
ಹಳುವ ತೆರೆಯ ಸೀಳಿ ಬಂತು
ಹೊಳಲ ಗಲ್ಲಿಗೆ.

೩

ಕಡಲನಳೆದು, ಕಾಡ ತುಳಿದು,
ಬೆಟ್ಟದಿಂದಲಳುಕುತಿಳಿದು,
ಇಳೆಯ ನಗೆಯ ನುಂಗಿ ಮುಳಿದು
ಸಂಜೆ ಬಂದಿತು—
ಹೊಳೆವ ತಾರೆ ತಳತಳಿಸುತ
ಲದೋ ನಿಂತಿತು!

೪

ದೂರ ದೂರಿಗೈದ ನಲ್ಲ
ನೀರೆಯ ಹಂಬಲದಿ ಮೆಲ್ಲ
ಗಾರಿದುಸಿರನುಸಿರುವಂತೆ
ಗಾಳಿ ಬೀಸುತ
ಸಾರಿ ಬಂತು ಸಂಜೆಯು ತಂ
ಬನಿಯ ಸೂಸುತ!

೭

ನೀಲ ಮುಗಿಲ ಮೋಗಣಿಂದ,
ನೀಲ ಕಡಲಿನಾಳದಿಂದ
ನೀಲಗೀತ ಲಹರಿಯೊಂದ
ದಿಳೆಗೆ ಸುರಿದುದು,
ನೀಲಿಯೊಂದೆ ಬಣ್ಣದಿಂದ
ಲಿಳೆಯ ಬರೆದುದು!

೮

ತಳಿರ ತಂಪು ತೆಕ್ಕೆಯಲ್ಲಿ
ಚಿಲಿಪಿಲಿಯಿಂ ಪಕ್ಕಿಯಲ್ಲಿ
ಉಲಿಯುತಿಹುದು ಪುಟ್ಟ ಮರಿಗೆ
ಸಂಜೆಯ ಬರವ—
ತಳಿಯುತಿಹುದು ಮನವ ನೊಂದು
ಬೇಸರಗಿರವ!

## ೨೮. ಇರುಳ್

ಪೊಂಬಿಸಿಲಸಿಂಬಿನಲಿ ಕಳ್ಳ ಹೆಜ್ಜೆಯನಿಕ್ಕಿ
ಬಿಂಬಿಸುವ ನಿನ್ನ ತವರೂರಾವುದೌ?
ತುಂಬಿ ಹರಿಯುವ ನಿನ್ನ ಜೀವದೆಲ್ಲೆಯು ಹಗಲೆ?
ಮುಂಬೆಳಗಿನೊಳಗೆಲ್ಲಿ ಮರೆಯಾಗುವೆ!
ನಿನ್ನ ನಾಡದು ಮೋಸ, ಬೀಡು ನಿನ್ನದು ಕಾಡು,
ಮುನ್ನಹಗಲೊಳ್ ಹಂದರವ ನಾರುವೆ?
ನಿನ್ನ ನೆರಳೊಳ್ ಕುಳಿತು ಇನ್ನೆನಿತೊ ಹಾಡಿದರು
ನಿನ್ನ ನೆನಹಿನ ಕನಸ ಮುನಿಗಳವರು.
ಇರುಳೆ! ನೀ ನಾಚಿ ಬೆಳಗಿನ ಸಿರಿಯ ಬಯಸದಿರೆ
ಮರುಳೆಂಬರದುಕತದಿ ನಿನ್ನನೆಲ್ಲರಾ.
ಮರವು ಎಂಬೀ ಮನದ ಕತ್ತಲೆಯ ಹೊರ ರೂಪ
ಇರುಳೆ! ನೀನೆಂದು ನಿನ್ನನು ಹಳಿವರು!
ನಿನ್ನ ಕರಕರವಾಲಿ ಮನದೆಲರ ನೀಳುತಲಿ
ಕಣ್ಣ ತಣಿಪಲರುಗಳ ಸವರುತಿಹುದು.
ಬನ್ನಬಡಿಸುವ ನಿನ್ನ ಬರವ ಹಾರೈಸುತಲಿ
ನಿನ್ನ ಗೆಳೆತನ ಬಯಸಿ ನಿಲುವನಾರೌ!
ಇರುಳೆ! ನಿನ್ನಾಳ್ಕೆಯಲಿ ತಿರೆಯು ತೂಕಡಿಸುತಿರೆ
ಸರಿಯೆಂದು, ಮರೆಯೆಂದು ಪೇಳ್ವರಾರೌ!
ಬರಿದಾಗಿಸುವೆ ಮನವ, ಪಿರಿದಾಗಿಸುವೆ ಮದವ,
ಸರಿಯಬೇಕೆಂದು ಬೇಡುವೆ ನಿನ್ನನು!
ಆವಾವ ನಳಿನಿಯರ ಮೊಗವ ಬಾಡಿಸಿದೆ! ನೀ
ನಾವ ನಾರಿಯ ಬಗೆಯ ಬಯಲಿನೊಳಗೆ
ಭಾವಜನ ಚಿತ್ತ ಬಿತ್ತಿದೆ? ಇರುಳೆ, ಮೋಹದಿಂ
ತೀವಿ ಭೂವಲಯವಂ, ನಲಿಯುತಿಹೆಯಾ?
'ಎನಿತೊ ಪಾಪವ ಗೈದ ಪರಣವಿದರನ್ನಳಿವೆ'
ನೆನೆಯುತ ನೀ ಹಗಲೆಂಬ ಕಡಲಿನೊಳಗೆ
ಕೊಸರಿಸಲು ದುಗುಡ, ಧುಮುಕುವೆಯಾದೊಡಂ ಮಗುಳ್
ಸಮನಿಸುವ ಸಂಜೆಯಲಿ ಸಂಜನಿಸುವೆ.

ಇರುಳೆ! ನಿನ್ನೀ ಮೊಗ್ಗದ ಕರಿಯ ಮುಸುಕಂ ತೆಗೆದು
ಬೇರಲ್ಲ ನೀನು ಹಗಲಿನ ಮಾತೆಯೆಂ
ಒಲವನೀಯೌ ಜಗಕೆ — ನಿನ್ನ ಕುವರನ ಬರವ
ನಿರದದಿರುನೋಡುತಿರುವೆಮ್ಮ ಬಗೆಗೆ!

## ೩೦. ತಾರೆ ಮತ್ತು ಮುಗುಳು

ಸಂಜೆಗೆಂಪು ಪರದೆ ಹಿಂದೆ ನಿಂದು ಕಡಲ ಕನ್ನಡಿಯಲಿ
ರಂಜಿಪ ನಿಜಬಿಂಬ ಸಿರಿಯ ನೋಡಿ ನಗುವ ನೇಸರನಲಿ
ತುಂಬಿ ಹರಿವ ಮೋಸವಿಂಟಿ ಧರಣಿ ಜೊಂಪುವಡೆದಿರುತಿರೆ
ಅಂಬರದಲಿ ತಾರೆ ಸುರಭಿಪಾದರಜ ದುಕೂಲದೊಳಗೆ

ನಿಂದು ಬೆಳಕ ಮಳೆಯ ಸುರಿಯೆ, ತಳಿರ ಕದವ ತೆರೆದು ಲತೆಯು
ತನ್ನ ಮುದ್ದು ಮಗಳು ಮುಗುಳ ಗಾಳಿಯಾಟಕಾಗಿ ಬಿಡಲು
ಮೊಗ್ಗಯದುವೆಯರಳಿ ಹೊಳಪ ಹೂನಲ ಸೂಸುತಿರುವ ಚುಕ್ಕೆ
ಯನ್ನು ಕಂಡುಮುದರ ಜನವನಿರದೆ ತಾನೆಯಳಿಸ ಬಯಸಿ

ಒಲಿತು, ಒಲಿತು, ರಸದಿ ಗಳಿತವಾಗಿಯರಳಿ ಕಂಪ ಸೂಸಿ
ಚೆಲುವ ತಾರೆ ಇರವನರಿಯೆ ಮೇಲೆಯಾಗಸವನು ನೋಡೆ
ತನ್ನ ಕೀರ್ತಿಲತೆಯ ಕಡಿವ ಮುಕುಳ ಜರಿದು ನಲಿವುದರಿತ
ಖಿನ್ನವಾಗಿ ತಾರೆಯಳಿವು ಒಟ್ಟೈವಿಡಿದು ಮಾಯವಾಯ್ತು

ಬಾಡಿದುಡುವ ಕಂಡು ಮೊಗ್ಗೆ ನಗುತು ಜಗವನಾಳುತಿರಲು
ತುಂಬಿಯುದರ ರಸದ ಮದವ ಹೀರಿ ಮೊರೆದು ಹಾರುತಿರಲು
ಕುಸುಮ ಮುಪ್ಪಿನಿಂದ ಕಂದಿ ಮೋಸವಾಂತು ನಿಂತುದರಿತು
ಜನವ ಬೀರಿ, ಇರುಳ ತೂರಿ, ಮೆರೆಯೆ ತಾರೆ ಮೂಡಿತಲ್ಲ!

## ೩೧. ಮೌನ—ಮಾತು

ಮೌನದಲಿ ಮಧುವುಂಟು.
ಮಾತಿನಲಿ ಮತಿಯುಂಟು;
ಮೌನ-ಮಾತುಗಳೆ ಬಾಳಿರುಳು ಹಗಲು!
ಮೌನದಲಿ ಕನಸೊಂದೆ.
ಮಾತಿನಲಿ ನೆನಸೊಂದೆ:
ಮೌನ ಮಾತಿನ ನೆಲೆಯ. ತಿಳಿಯಲೆಳಸೆ.

೨

ಮೌನದಿರುಳಲಿ ಕುಳಿತು
ಇತಿಹಾಸದಾದಿಯಲಿ
ಮುನಿಗಳೀಂಟಿದ ಸತ್ಯ ಜೀವವಾಯ್ತು!
ಮಾತಿನಲೆಗಡಲ ತಲ
ದಿಂದಾಯ್ದ ಮೌಕ್ತಿಕವೆ
ಪ್ರಕೃತಿಯೊಡಗೂಡುತೀ ಸೃಷ್ಟಿಯಾಯ್ತು!

೩

ಮಾತಿನಲಿ ಮೌನದೇ
ಕಶ್ರುತಿಯ ಮಾಧುರ್ಯ-
ರಾಗರಾಗಗಳಾಗಿ ಕೇಳಬಹುದು;
ಮೌನದಲಿ ಇಳೆಯೊಳಿಹ
ವಿವಿಧ ವರ್ಣದ ರೂಪ
ಜಾಲವೊಂದೇ ಶುಭ್ರರಾಗವಹುದು!

೪

ಮೌನವೊಂದೇ ಸಾಕು,
ಮೌನ ಮಧುರಿಮೆಯಮೃತ
ಪಾನದಿಂ ಮೈಮನವ ಮರೆಯೆ ಜಗವು!
ಮಾತಿನಾಕಾಶದಲಿ
ಮೌನ ಸಂಗೀತದಲಿ
ಜೀವನದ ಹಕ್ಕಿ ಹಾರಾಡುತಿರಲಿ!

## ೩೭. ಹೂಗಳು

೧

ಮಲ್ಲಿಗೆ ಮಾಲತಿ ಚೆಲುವೆಯರು,
ಸೊಲ್ಲಿ ಸದಾಲತೆಗೊಲಿದಿಹರು.
ಸಲ್ಲಲಿತವು ಸುಮವಲ್ಲರಿ ಎಲ್ಲೆಡೆ
ಪಲ್ಲವಿಸಿವೆ; ವೈಶಾಖದ ವಾತದಿ
ದೂರದಿಂದ ಶೃಂಗಾರದ ವಾರ್ತೆಯು
ಸಾರಿಬಂದು ಹೃತ್ಕುಸುಮವನರಳಿಸಿ
ಉತ್ಸಾಹದ ರವ ಮಾಡುತಿದೆ!

೨

ಅಲ್ಲದೊ, ಸಂಪಿಗೆ ಅರಳಿಹುದು,
ಮಲ್ಲಿಗೆ ಮಲರೊಂದುರುಳಿಹುದು.
ಕಲರವದುದಯವು ಕಾಡಿನೊಳೆಲ್ಲೆಡೆ
ಮೆದುತಳಿರಲಿ ಚೈತನ್ಯವನೆಬ್ಬಿಸೆ,
ದೂರದಿಂದ ಆನಂದದ ಕರೆಯದು
ಸಾರಿಬಂದು ಪ್ರತಿಭೆಯನಿರದರಳಿಸಿ
ಉತ್ಸಾಹದ ರವ ಮಾಡುತಿದೆ!

೩

ಹೂಗಳ ರಾಣಿ ಗುಲಾಬಿ ಇದೊ,
ಬಾಗಿದ ಲಜ್ಜೆಯೊಳಡಗಿಹುದೊ!
ಫುಲ್ಲ ಪ್ರಸೂನಗಳೆಲ್ಲವು ಸಮನಿಸಿ
ಚೆಲ್ವ ಗುಲಾಬಿಗೆ ಪಟ್ಟವಗಟ್ಟಿರೆ,
ದೂರದಿಂದ ತೆಂಗಾಳಿಯು ಮಂಗಳ
ವಾರಿ ಬಿಂದುಗಳ ತಳಿದೆದೆಯರಳಿಸಿ
ಉತ್ಸಾಹದ ರವ ಮಾಡುತಿದೆ!

## ೩೩. ಮಲೆನಾಡಿನ ಒಂದು ಹಳ್ಳಿ

೧

ಮೈಸೂರ ಸಿರಿಮುಡಿಯು, ಮಲೆನಾಡ ವೈಸಿರಿಯ
ಕಣ್ಣಾರೆ ಕಂಡ ಕವಿ ಧನ್ಯನತಿ ಧನ್ಯ!
ಮುಂಗಾರ ಮಳೆ ಹೊಯ್ಯೆ, ಮಲೆನಾಡಿನಿಳೆ ತೊಯ್ಯೆ.
ತೊಯ್ದು ಬಟ್ಟೆಯನುಟ್ಟ ಗಡಸುಗಾತಿಯಹಂತೆ,
ಉತ್ತುಂಗ ಗಿರಿಸಾಲು ಕಣ್ಗೆ ಸೊಗಸಲ್ತೆ
ಗುಳುಗುಳಿಸಿ ಹರಿವ ಕಾಳ್ಪುರಗಳಿಕ್ಕೆಲದಡವಿ,
ಮುಕ್ತಿಕಾಂತೆಯ ಬೀಡೊ, ಭಾವದೇವಿಯ ನಾಡೊ,
ಕವಿಕಾಂಬ ಸ್ವಪ್ನಲೋಕದ ಸೊಬಗಿದಲ್ತೆ!
ಹಳ್ಳಿಗಳ ಹಸುರಂಚು, ಬಾಂದಳದ ಬೆಳ್ಮಿಂಚು,
ಕಾನನಾದ್ರಿಯ ರಮ್ಯರೂಪರಾಶಿಯ ಸಂಚು,
ಮಲೆನಾಡೊಳಲ್ಲದನ್ಯತ್ರವೆಲ್ಲಿ?
ಇಂತೆಸೆವ ಮಲೆನಾಡಿನಂತರಂಗದ ಸವಿಯೊ,
ಪಂಪರನ್ನಾದಿ ಕವಿರತ್ನರಾಡಿದ ದಿವಿಯೊ.
ಕಣಿವೆ ತೋಟಗಳಲ್ಲಿ ನೆಲೆಸಿಂತ ಹಳ್ಳಿ!

೨

ಮಾಲತಿಯ ತೀರದಲಿ ಮಲೆತು ನಿಂತಿದೆ ಬೆಟ್ಟ
ಮಲ್ಲಿಕಾರ್ಜುನನೆಂಬ ಗರುವಿಕೆಯ ಹೆಸರೆತ್ತಿ.
ತುಂಬಿದ ಹಸುರ್ಗಾಡು ನದಿಯಂಚಿನಲಿ ಹರಡಿ,
ಗುಯ್ಯೆಂಬ ಹೇರಡವಿಯಾಗಿ ಮುತ್ತಿದೆ ಮಲೆಯ.
ಗಿರಿಯೆದೆಯೊಳಲೆದಲೆದು ಮರೆಯಾದ ಕಾಲ್ದಾರಿ
ಎನಿತು ಸುಗ್ಗಿಯ ಸಿರಿಯನೋಲೈಸಿ ಸಿಂದಿಹುದೊ!
ಈ ಕೋಡಿನೀ ತುದಿಯೊಳರೆ ಬಿದ್ದ ದೇಗುಲವೊ,
ಆವ ರಾಯನ ಕಾಲದೈಸಿರಿಯ ಸಿರಿಮುಡಿಯೊ!
ಹಗಲಿರುಳೊಳೋರಂತೆ ಆಳವಾದೀ ಮೌನ
ಕಣ್ಮುಚ್ಚಿ ಕುಳಿತಾವ ಕನಸ ಕಾಣುತಲಿಹುದೊ!
ಕಂಡ ಕನಸಿನ ಸ್ವರ್ಣಲತೆಯ ರತ್ನದ ಹೂವೊ,
ಉದಯಾರುಣನ ಕಿರಣರಾಶಿ ರಂಜಿಪುದಲ್ಲಿ?

ಈ ಬೆಳಗಿನೀ ಬೆಟ್ಟ, ಈ ಶಿಲಾದ್ರಿಯ ಶಿಲ್ಪ,
ಮಾಲತಿಯ ಮೃದು ತಲ್ಪ. ಈ ಕಾಡಿಸೀ ಚೆಂದ,
ಕಲ್ಪ ಕಲ್ಪಗಳಳಿಯಲಿಂತೆ ತಾ ನಿಲ್ಲುವುವು!
ಬಳಿಯ ಜನಮಾತ್ರ ಇದನರಿಯದಿಹುದು ವಿಚಿತ್ರ!

೭

ಗಿರುಸಪ್ಪಾಪದಲೆ, ಮಾಲತಿಯ ಮಳಲಂಚಿನಲೆ,
ಪೆರ್ಮರದ ಸಂಚಿನಲಿ ಅವಿತು ಕೂತಿದೆ ಹಳ್ಳಿ.
ಅಡಿಕೆ, ಹೊಂಬಾಳೆ, ಮಾದಲ, ನಿಂಬೆ, ದಾಳಿಂಬ,
ಮಾವು, ಕಿತ್ತಳೆ, ಕಂಚಿ! ಫಲತರುವೊ ಹೇರಾಳ!
ಸುಳಿವೆಲರ ತಂಪಿಂಗೆ ಮೈಬಿಟ್ಟ ಮಲ್ಲಿಗೆಯ,
ಜಾಜಿ, ಸೇವಂತಿಗೆಯ ಬಣ್ಣ ಬಣ್ಣದ ಬಳ್ಳಿ
ಸ್ವಾತಂತ್ರ್ಯ ಲತೆಯಂತೆ ಹರಡಿದ ತಳಿದೋಟ
ಬಲು ಚೆಂದ, ಬಲು ಚೆಂದವೆನಿಸಿ ತೋರಿದೆ ನಾಡ!
ಮನೆಗಳೋ, ನಾಲ್ಕಾರು: ಅದರೊಳೊಂದೆರಡರಲಿ
ಅರೆಬಿದ್ದ ಕಲ್ಗೋಡೆ, ಸುಳಿವ ಜನವೊಂದಿಲ್ಲ;
ಉಳಿದಲ್ಪ ಮಂದಿಗಳೆ ಈ ಹಳ್ಳಿಗದೆ ಜೀವ!
ಮೆದ್ದು ಮುಗಿಯದ ಹಣ್ಣು, ಮುಡಿದು ಕಳೆಯದ ಹೂವು,
ಅಲೆದುತೀರದ ಅಡವಿ, ನೀರನಿರ್ಮಲ ಠಾವು;
ಇದು ಸಮೃದ್ಧಿಯ ಬೀಡು. ಇದು ಸುಖದ ತಾಯ್ನಾಡು,
ಈ ತೆರನ ಸಿರಿಯಿಂದಲೀ ಹಳ್ಳಿ ಬೆಳಗುತಿದೆ;
ಜನಜೀವನವದೇಕೋ ಅಳಲಿಂದ ತೊಳಲುತಿದೆ!

೮

ದಂಡೆತ್ತಿ ಪರರಾಜ್ಯದರಸು ಬಂದರೆ, ಬರಲಿ,
ಹಿಂಡುಹಿಂಡಾಗಿ ಬೇಸರಿಕೆ ಬೇನೆಗಳಿರಲಿ,
ಅಣು ಮಹತ್ತುಗಳ ತುಲನೆಯ ಶಾಸ್ತ್ರ ಕಣ್ತೆರೆದು
ನೂರಾರು ಲೋಕಗಳನೊಂದೆ ನಿಮಿಷದಿ ಸುಡಲಿ,
ಹೆಸರ ಹೋರಾಟ, ಉಣಲಿರದ ಚೀರಾಟ, ಇ
ನ್ನೆನಿತೆನಿತೊ ಪರಿಪರಿಯ ಪರಿಭವಗಳೇರಾಟ

ಇಳೆಯನೆಲ್ಲವ ನುಂಗಿ ನೊಣೆದು ಗರ್ಜಿಸುತಿರಲಿ —
ಏನಾದರೇನಂತೆ, ಇಲ್ಲಿಗವು ಬರದಂತೆ,
ಮೂರು ಕಾಲಕು ಒಂದೆ ರೀತಿ ರೂಪವ ಧರಿಸಿ
ಕದಲದೆಯೆ ಕುಳಿತಿಲ್ಲಿ ತೃಪ್ತಿಯಿಂದಿದೆ ಹಳ್ಳಿ!
ಮಾಲತಿಯ ತಡಿಯೊಳೆತ್ತರದಿ, ಪುಳಿನಸ್ಥಳದ
ಬೆಟ್ಟದೆಳೆಜಾರಿನಲಿ, ತುಸು ಚೆದರಿದಿಕ್ಕೆಯಲಿ
ಬೆಚ್ಚಗಿನ ಮನೆಯೊಂದು; ಮನೆಯ ಮುಂಭಾಗದಲಿ
ನಳನಳಿಪ ಹೂದೋಟ, ನದಿಗಿಳಿವ ಸೋಪಾನ
ಅಲ್ಲೆ ಮಾವಿನ ತೋಪು — ತಳಿರ ತಂಪಿನ ತೆಕ್ಕೆ —
ಶೃಂಗಾರ, ವೀರ, ಕರುಣಾದ್ಭುತ ಕಥಾಸಾರ
ಗಳನೆಲ್ಲ ಕುಡಿಕುಡಿದು ಕುಳಿತು ತೂಕಡಿಸುತಿದೆ.
ಹರೆಯದೇರಿನ ಹುಡುಗ ಹುಡುಗಿಯರ ಕೂಟಕಿದೆ
ನಲ್ಮೆ, ನಗೆ, ನೋಟ, ಬೇಟದ ಭಾವ ಬಂಧನಕೆ
ಇದು ಕಲಿವ ಶಾಲೆಯೆನೆ, ತೂಗಿ ತೊನೆವೀ ಕೊಂಬೆ
ಹೃದಯ ರಾಗಧ್ವನಿಗೆ ಶ್ರುತಿಯ ಕೂಡಿಸುತಿಹುದೊ!
ಹುಡುಗರಾಟವ ಕನಲಿ ನೋಳ್ಪ ಮುದುಕನ ಹಾಗೆ
ಮುದಿ ಗೂಗೆ ಕುಳಿತಿಲ್ಲಿ ಕೋಗಿಲೆಯ ಕೆಣಕುತಿದೆ!
ಅಂದಿಸಿಂದಿನ ಸಿರಿಯೊಳಂತರವ ತೋರುತಿದೆ!
ಇದುವೆ ಬ್ರಹ್ಮನ ಕಾಸು, ಅದೊ ಮಹೇಶ್ವರನ ಗುಡಿ.
ಇದೊ ನಂದಿಯಾವಾಸ, ಅದೊ ಮಹಂಕಾಳಿ ಗುಡಿ.
ಎಂದು ಜನವೆನಿತೆನಿತೊ ರುದ್ರರಂಗವ ತೋರಿ,
ಈ ಕಾಡ ಬೀಡೆನದೆ, ಭಯಕೆಡೆಯ ಮಾಡುವುದೆ,
ಕರೆದುಂಬಿ ಕವಿಲೆಯನೆ ಹುಲಿಯುಂತೆ ನೋಡುವುದೆ!
ಆದೊಡೇನಿಲ್ಲ. ಕವಿ ಕೂತು ಕವನವ ಗೆಯ್ಯೆ
ಇದು ಕಲ್ಪನಾಲೋಕದಮೃತರಾಣಿಯ ಶಯ್ಯೆ!

## ೨೪. ಗೋವಳರು

೧

ತನಿವಣ್ಣ ತಿಂದು, ಪೂಮುಡಿದು. ಮರದಡಿಯೊಳಿಂ
ಇನಿಗೊಳಲನೂದಿ, ದನಗಳ ಕಾದು, ಗೆಳೆಯರೊಡ
ನನುದಿನಂ ಕಾಡ ರಾಜ್ಯದ ಸಿರಿಯನಾಳ್ವ ಗೋ-
ವಳರ ಬಾಳೇಂ ಸೌಖ್ಯವೋ!
ಕಣಿವೆ ತಪ್ಪಲು ತೋಟ ಗಿರಿ ನದೀತಟದೊಳಿನಿ
ದನಿಗುಡುತಲೋಡುತಾಡುತ ಸಂತಸದಿ ಹೊತ್ತು
ತಣಿವ ಮೊದಲೆದ್ದು ತುರುಮುಂದೆ ನಾಡಿನ ಗಡಿಯ
ಮೆಟ್ಟಿಸುವುದಲ್ತೆ ಕಜ್ಜ!

೨

ನಾಡಿಗಾರರಸೆಂಬ ಗೊಡವೆ ಸಲ್ಲದು, ತನ್ನ
ಬೀಡೊಳುಣಲುಂಟಿಲ್ಲವೆಂಬುದವನೇಂ ಬಲ್ಲ,
ರೂಢಿಸಿದ ತುರುಕಾರ ಕಪಿಲೆ ಕಣ್ಮರೆಯಾಗ
ಲೊಡೆಯ ಕೋಪಿಸುವನೆಂಬ
ಗಾಡಿಯೊಂದೇ ಗುರಿಯದಲ್ಲದೇನುಂಟವನ
ರೋಡಿಸುವ ಕುತ್ತ! ಇಂತಲ್ತೆ ಜೀವನಲೀಲೆ
ಬೀಡುಬಿಟ್ಟಿರೆ ಸೌಮ್ಯ ಸಾತ್ವಿಕರ ವೃಂದದಲಿ
ಮುನಿಗಳೇಕಾಗರವರು!

## ೩೫. ಯಾತ್ರಿಕರ ಹೊಳೆಯ ಪಯಣ

ಬಳಿಯ ಬೆಟ್ಟದಲಿ ಗೋವಳರ ಕೈಗೊಳಲಿನಿಂ
ದುಲಿವ ಮೆಲ್ದನಿಯೊಂದು ಕೇಳುತಿಹುದು.
ಎಳದಳಿರ ಮರ್ಮರದ ತಿಳಿಸುಡಿಯ ಹಾಡ ತಂ
ಬೆಲರು ಕಿವಿಯೊಳ್ ತಂದು ತುಂಬುತಿಹುದು.
ಊರ ದೇಗುಲದ ಘಂಟಾರವವು ದೂರದಿಂ
ಸಾರಿ ಬಹ ಸಂಜೆಯನ್ನರುಹುತಿಹುದು.
ಕೇರಿಕೇರಿಗಳ ಮನೆಯೋರಂತೆ ದೀವಿಗೆಯು
ಬಾರಿಬಾರಿಗೆ ಮಿಣುಗಿ ಬೆಳಗುತಿಹುದು.
ಮಲ್ಲೆಲರು ಸೂಸುತಿಹ ಸಲ್ಲಲಿತ ಪರಿಮಳವು
ಇಲ್ಲಿ ಹಗಲೊಳು ಹೂಗಳರಳಿರುವುವೆಂ
ದುಲ್ಲಸದಿ ಸೊಲ್ಲಿಲ್ಲದುಲಿಸಲೆಯ ಬೀರುತಿದೆ
ಚೆಲ್ಲಾಟವಾಡುವೀ ಹೊಳೆಯ ಸೀರೊಳ್.
ಗಿರಿಯಿಂದ ಹರಿದು ಬರುವೀ ತರಂಗಿಣಿ ಜಲದೊ
ಳಾರದೀ ಇರುಳು ಸಂಚರಿಸುತಿಹುದು?
ಮಿರುಗುತಿಹ ಧ್ರುವತಾರೆ ಹರಿವ ದಾರಿಯ ತೋರೆ
ಗರಿವೋಡವೇರಿ ಬೆಳಕನ್ನೀವುದು.
ಆಳವಾದೀ ಹೊಳೆಯು ಬೀಳೆ ಕೊಳ್ಗಲ್ಲಿನಿಂ
ಗೋಳೆನುತ ಮರುಮರುಗಿ ನಿಡುಸುಯ್ಯಲು,
ಕಾಲಧೂಮವುಮದರಿನೆಳ್ದು ಬಿತ್ತರಿಸಿದೊಲ್
ಗಾಳಿಯೊಳ್ ತೀವಿಹುದು ಕರಿಯ ಮಬ್ಬು.
ಪರಿದೊರೆಯ ನಡುವಿನೊಳಗೀ ಯಾನಪಾತ್ರದೊಳ್
ತ್ವರೆಗೈದು ಸಾರುತಿಹ ತಾವಾವುದು?
ನೆರೆಯೂರಿನೊಳ್ ನಾಳೆ ನೆರೆವ ಹಬ್ಬದಿ ನಯನ
ಪಿರಿದೂಟವಂ ಸವಿಯಲಾತುರಿಪುದೆ?
ತಿಳಿವು ಹೂವಳ್ಳಿಯೊಳ್ ಮಾಕ್ಕೆಯೆಂಬಾ ಕುಸುಮ
ದಳಬಿರಿಯೆ, ಭಕ್ತಿಮಧುವಂ ಸೂಸುತ
ತಳಿರಿಸಿಂವಲರಿನಿಂ ಸಿಂಗರಿಸಿದಾ ತೇರ
ಬಳಿಗೈದಿ ನಾಳಿಕೇರವನೊಪ್ಪಿಸೆ

ಮಾತುಕೊಟ್ಟಹಸವನು ಮತಿಯನಿತ್ತಹಸನನು
ಮಾತು ಮತಿಯೊಂದಾಗಲವನ ಪದದಿ
ಪೂತ ಚಿತ್ರವನಿರಿಸಿ ಹೊಳೆವ ಪಳುಕಿನ ತೆರದ
ಹೃತ್ತಲದೊಳವನಡಿಯ ನೆಲೆಗೊಳಿಸಿರಿ.
ನಿಮ್ಮ ನಾಡಿನ ಹೆಸರ ಮರೆಯದಿರಿ ಯಾತ್ರಿಕರೆ!
ನಿಮ್ಮೂರಿನೀ ದೀನಜನವೃಂದವ;
ನಿಮ್ಮ ನಾಡಿನೊಳರಂ ನೆರೆ ಮೊರೆಯುತಿರಲೆಂದು
ಒಪ್ಪಿಸಿರಿ ನಿಮ್ಮ ಮನ ದೇವನಡಿಯೊಳ್!

## ೩೮. ವರುಷವಿಂತು ಕಳೆಯುತಿಹುದು

೧

ವರುಷವಿಂತು ಕಳೆಯುತಿಹುದು.
ಘನತರ ಗಂಭೀರವಾಗಿ,
ಬರುವುದದಿನ್ನೇನ ತಹುದೋ
ಎನಗಳವಲ್ಲ — ನೆನೆಯಲು ಸಲ್ಲ!

೨

ಒಂದು ದಿನಂ ಶಾಂತಿಯಿಲ್ಲ,
ನೊಂದೆದೆ ಗದಗದಿಪುದಲ್ಲ!
ಬಂದ ಬವಣೆಗೆಸಿಸಾದರು
ಅದಿರದುದಿಲ್ಲ — ಬೆದರಿದುದಿಲ್ಲ!

೩

ಸುಂದರ ಮಧು ಬಂದಿತಿಂದು
ಎದೆದಾವರೆಯರಳಿತೆಂದು
ನೊಂದ ನೋವ ನುಂಗಿ ನುಡಿವ
ನಂಬುಗೆಗಿಲ್ಲ — ಇಂಬಿನಿಸಿಲ್ಲ!

೪

ಉದಯಾಸ್ತಗಳೊಂದೆ ತೆರದಿ
ಜರಾಮರಣ ಸಟೆರ ಸರದಿ
ಬದುಕಿನ ಬರಿ ಭ್ರಮೆಗಳಂತೆ
ಕಳೆಯುತಿರುವುವು — ಹೊಳೆಯುತಿರುವುವು!

೫

ಏಕೋ ಮನವಳುಕುತಿಹುದು,
ಆಶೆಯ ಕೊರಲೊಂಕುತಿಹುದು,
ಸಂಜೆಯ ಸುಮದಂತೆ ಬದುಕು
ಬಿಗಿಯುತಿರುವುದು — ಮುಗಿಯುತಿರುವುದು.

೬

ಮುಪ್ಪಿನ ಮುಂಬೆಳಗಿನಂತೆ,
ಕನಸುಕಂಡ ಕವನದಂತೆ
ಹೊಳೆವ ನಾಳಿನಾಶೆಗಿಂದು
ಕನವರಿಸುವುದು — ಮನಮರೆಸುವುದು!

## ೩೭. ಕನ್ನಡ ಕುಲ*

೧

ಸುಂದರ ದಿನ ಬಂದುದು
ಹೊಂಗನಸನೆ ತಂದುದು.
ಜೀವನಸುಮವರಳಿತು.
ಭಾವನೆ ಪರಿಮಳಿಸಿತು —
ಸೊಗದ ಹಕ್ಕಿ, ನಗೆಯೊಳುಕ್ಕಿ
ಬಗೆಯುಗಲಕೆ ಹಾರಿತು!

೨

ದೀವಳಿಗೆಯ ತನಿವೆಳಗಿನ
ಚಿನ್ನದ ಕುಡಿ ಕೊನರಲಿ!
ಪಾವನ ಕನ್ನಾಡ ಕಣಜ
ಪನ್ನದ ತೆನೆ ತೀವಲಿ!
ಸತ್ವ ಶಾಂತಿ, ಶರತ್ಕಾಂತಿ
ಕನ್ನಡ ಭುಜಕೀರ್ತಿ
ಕನ್ನಡ ತಾಯ್ಮೂರ್ತಿ.
ಹಳೆಯ ಭ್ರಾಂತಿ, ಅಳಿವ ಕ್ರಾಂತಿ
ಗಿಂದೆ ನಿಜ ಸ್ಫೂರ್ತಿ!

*ಹುಬ್ಬಳ್ಳಿಯ 'ಲೋಕಮತ' ದಿನಪತ್ರಿಕೆಯ ಸಹಸಂಪಾದಕನಾಗಿದ್ದಾಗ 1938ರಲ್ಲಿ ದೀಪಾವಳಿಯ ದಿನ. ಪತ್ರಿಕೆಯ ವಾಚಕವೃಂದದ ಯಶಶ್ಚಿಂತನಾರ್ಥವಾಗಿ ಬರೆದದ್ದು.

೫

ಕನ್ನಡಕುಲವೊಂದೇ ಕುಲ,
ತಾಯೊಬ್ಬಳೆ ನಮಗೆ;
ಕನ್ನಡ ನುಡಿಯೊಂದೇ ನುಡಿ
ಕಾಯುವ ಕೈ ನಮಗೆ!
ತನುಮನ ನಿರ್ಮಲವೆನಿಸುತ
ಬೆಳಗಾತ್ಮ ಜ್ಯೋತಿ!
ಮನೆಮನೆಯಲಿ, ದೀಪಾವಳಿ,
ಅದೆ ಭ್ರಾತೃಪ್ರೀತಿ—
ಕನ್ನಡಕಿದೆ ಖ್ಯಾತಿ!
ಜಯ ಕನ್ನಡ ಮಾತೆ!
ಭಾರತ ಸುಪ್ರೀತೆ!

## ೩೮. ದಿನವಿದಿಲ್ಲಿ ನಿಮಿಷವಾಯ್ತು

೧

ದಿನವಿದಿಲ್ಲಿ ನಿಮಿಷವಾಯ್ತು,
ಮನಕಮಿತ ಹರುಷವಾಯ್ತು,
ತನುಮನ ಪರಿಪೂತ
ಕನಸಿನೊ ಸಂಗೀತ.

೨

ಬಿತ್ತರಿಸಿದ ಬಯಲ ನೆಲಂ,
ಸುತ್ತಿ ಹರಿವ ಹೊಳೆಯ ಜಲಂ.
ಸುತ್ತಲು ಗಿರಿಮಾಲೆ,
ಎತ್ತಲು ಹರಿಲೀಲೆ.

೩

ಪೂರ್ವ ದಿಗಂತದ ಮೇಲೆ
ಶರ್ವರಿಯೋಲಗ ಸಾಲೆ,
ಚಂದ್ರೋದಯ ಕಾಂತಿ,
ಸಾಂದ್ರತಮೋಭ್ರಾಂತಿ,
ತಂದಿತು ಸುಖಶಾಂತಿ.

೪

ಬಯಲು, ಬಾನು, ಬೆಟ್ಟದೆಡೆ,
ನಿಯತಿ ಮಧುರ ಮೌನವಡೆ.
ಪ್ರತ್ಯಕ್ಷವಾಯ್ತು ಸಗ್ಗ,
ಕವಿ ಧ್ಯಾನಮಗ್ನ.

೫

ಅಸಂಖ್ಯಾತ ಶಶಿವ್ರಾತ
ಅಸಮ ಸುಧಾಸ್ರೋತ
ಸ್ನಾತ ಮನೋನಾದ
ಆತ್ಮಸುಖ ವಿನೋದ.

---

* ಹುಕ್ಕೇರಿರೋಡ್ ಆರೋಗ್ಯಧಾಮದಲ್ಲಿ 1938ನೇ ದಶಂಬರ ತಿಂಗಳಲ್ಲಿ ಆರೋಗ್ಯಲಾಭಕ್ಕೆ ಹೋಗಿದ್ದಾಗ ಅಲ್ಲಿ ಒಂದು ರಾತ್ರಿ ಕಂಡ ದೃಶ್ಯಾನುಭವ.

## ೩೯. ಮನೆಯ ನೆನಪು*

೧

ದಿನಗಳೆನಿತೋ ಕಳೆದುವೆನ್ನ
ಮನೆಯನಗಲಿ ನಲಿಯುತ.
ಹುಟ್ಟಿದೂರ ಬಿಟ್ಟು ದೂರ
ವೆನಿತೋ ನಡೆದೆನಲೆಯುತ.

೨

ಆವನಾಡೋ, ಆವ ನುಡಿಯೋ,
ಆವ ಜನರ ಮಧ್ಯದಿ,
ಭಾವ ಜೀವ ಹರಿದುದಿಲ್ಲಿ
ದಾವ ನೆಲೆಯ ಸಖ್ಯದಿ!

೩

ಮನೆಯ ಎದುರ ಮಾವಿನಡಿಯ
ಕೊಳದ ತಡಿಯ ಹಂಬಲ!
ಇನಿಯ ಗೆಳೆಯರೊಲವಿನುಲಿಯ
ದೆನಿತು ಸೊಗದ ಬಂಬಲ!

೪

ಆರ ನೆನಪೊ, ಆರ ನೆಳಲೊ
ಬಗೆಯೊಳರಳಿ ಬಿಂಬಿಸಿ,
ದೂರದಾಸೆ ನಿಲುಕದಿರಲು
ಕನಸಿದಾಯ್ತು ಚುಂಬಿಸಿ!

೫

ಸುಗ್ಗಿ ಎಸಳ ಸಂಜೆಯಲ್ಲಿ
ತುಂಬಿ ದೂರ ತಡಿಯಲಿ,
ಒಗ್ಗಿ ಕುಳಿತೆ ಬದಿಯೊಳಿಲ್ಲಿ
ಆರು ಕಾಣದೆಡೆಯಲಿ.

*1932ರಲ್ಲಿ ಕನ್ನಡ ನಾಡನ್ನು ಅಲೆಯುತ್ತಿದ್ದಾಗ, ನಿಪ್ಪಾಣಿಯಲ್ಲಿ ಒಂದು ಸಂಜೆ ಬಂದ ಭಾವ ಇದು.

೬

ಹಕ್ಕಿಯೊಂದು ಹಾರಿಬಂದು
ಗೂಡ ಸೇರಿತಿದಿರಿಗೆ,
ರೆಕ್ಕೆ ಬಿಚ್ಚುತದರವೋಲು
ಹಾರದಾದೆನೂರಿಗೆ!

೭

ನೂರು ಯೋಜನಗಳ ದಾಟಿ
ಬಂದೆನೇತಕಿಲ್ಲಿಗೆ?
ಕ್ರೂರ ವಿಧಿಯದಾವುದೆನ್ನ
ನೆಳೆದು ತಂದುದಿಲ್ಲಿಗೆ?

೮

ಕಡಲ ಗಾಳಿ ಕರೆಯುತಿಹುದು
ಪಡುವಲೂರಿನಂಚಿಗೆ
ಪಡುವಲೂರ ಕೆರೆಯ ತೊರೆಯ
ಹಸರು ಹಾಸಿದಂಚಿಗೆ!

## ೪೮. ಹಾಳೂರ ಕತೆ

[1930ರಲ್ಲಿ ಕವಿಯ ಮನೆಯಲ್ಲಿ ಆಕಸ್ಮಿಕವಾಗಿ ಬಂದೊದಗಿದ ಸಿಡುಬಿನಿಂದ ೬ ಮಂದಿ ಮರಣಪಟ್ಟಾಗ ಬರೆದುದು.]

ಐವತ್ತು ವರುಷದ ಹಿಂದೆ ನಮ್ಮೂರಲಿ
 ನಡೆದೊಂದು ಕತೆಯನು ನುಡಿವೆ,
ಭಾವನೆಯೊಳಗಿಂದೂ ಹೊಸತಾಗಿ ನಿಂತಿದೆ,
 ಹೇಳುತ್ತ ಕಂಬನಿ ಕರೆವೆ.

ನಮ್ಮೂರಿನೊಳಗಂದು ಮನೆಗಳಿದ್ದುವು ನೂರು
 ಮನೆಗೆಲ್ಲ ಹತ್ತಾರು ಆಳು;
ಮನೆಯ ಅಂಗಳ ತುಂಬ ತಿಂಬ ಕಾಳಿನ ರಾಶಿ,
 ಮನೆಗಾರು ಹೋರಿಯ ಜೋಡು.

ಗುಡಿಸಿಲ ಮುಂಗಡೆ ತೊಂಡೆಯ ಚಪ್ಪರ,
 ಬಳಿಯಲ್ಲೆ ಬಿಸಿನೀರ ಕೊಡವು;
ದುಡಿದಿಡೀ ಹಗಲಲ್ಲಿ ಸಂಜೆಯಾಗಲು ಮಿಂದು
 ಉಂಡು ಲಾವಣಿಗಳ ಹಾಡಿ,

ಚಿಣ್ಣರಿಗೊಳ್ಳೊಳ್ಳೆ ಕತೆಗಳ ಹೇಳುತ್ತ
 ಇರುಳೆಲ್ಲಾ ನಿದ್ದೆಯ ಮಾಡಿ,
ಒಣ್ಣವ ಮೂಡಲು ತಳೆಯುವ ಮೊದಲೆದ್ದು
 ತಂಗೂಳೂಟವ ಮಾಡಿ, ಹೊಲಕೆ

ಕೊಡಲಿಯ, ಕುಡುಗೋಲ ಹಿಡಕೊಂಡು ನಡೆವರು,
 ಸಂಜೆಗೆ ಮನೆಗೆಲ್ಲ ಬಹರು.
ದುಡಿತದ ದುಡ್ಡೆಲ್ಲ ಉಡುಗೆಲೂಟಕೆ; ಮಿಕ್ಕ
 ಪಾಲ ಗಂಟಿಕ್ಕುವರವರು.

ಬಡತನದಿಂದಲೆ ಒಳ್ಳೆಯ ಬದುಕನು
 ಬದುಕುತಲಿದ್ದರು ಎಲ್ಲ;
ನುಡಿದಂತೆ ನಡೆಯದ, ನಡೆದಂತೆ ನುಡಿಯದ
 ಸುಳ್ಳು ಜೀವನ ಮಾಡರವರು.

ಹಬ್ಬದ ಅಬ್ಬರವೇನು, ನಮ್ಮೂರಲಿ
ಮದುವೆಯ ದಿಬ್ಬಣವೇನು!
ಉಬ್ಬಿದಾಳ್ಗಳ ಶಿವರಾತ್ರಿಯಾಟಗಳೇನು
ತುಂಬಿದೂರಿನ ಕತೆ ಕೇಳಿ.

ಕಡೆಗೊಂದು ದಿನ ಬಂತು— ನೆನೆದರೆ ಮೈಯೆಲ್ಲ
ಗಡಗಡ ನಡುಗುವುದೀಗ!
ಸಿಡಿದೊಂದು ಸಿಡಿಲಂತೆ ಸಿಡುಬೂರ ಹಬ್ಬಿತು.
ತುಂಬಿದ ಮನೆಯೆಲ್ಲ ಬರಿದು!

ಮಡದಿಯ ಕಳಕೊಂಡರೆನಿಬರೊ, ಗಂಡರ
ಕಳಕೊಂಡ ಹೆಂಡಿರು ಬಹಳ;
ಮಡದಿ, ಮಕ್ಕಳು, ತಂದೆ ಎಲ್ಲರೂ ತೀರುತ
ಅಡಗಿದ ಮನೆತನ ಬಹಳ!

ನಿನ್ನೆ ನಕ್ಕವರಿಂದು ಅಳುವರೆಂಬುವ ಮಾತ
ನಮ್ಮೂರ ಕತೆಯಲ್ಲಿ ನೋಡಿ!
ನಿನ್ನೆ ಕಂಡವರಿಂದು ಕಾಣರು, ಕಣ್ಮುಚ್ಚಿ
ನಡೆವರು ಪರಲೋಕಕಾಡಿ!

ದಿನಕೊಂದು ಮನೆಯಲ್ಲಿ ನಾಲ್ಕೈದು ಹೆಣಗಳು
ಹೆಣವ ಹೂಳಿಡುವರ ಕಾಣೆ!
ದಿನದಿನವೀಪರಿ ಮಡಿವರಿಮ್ಮಡಿಯಾಗಿ
ನಮ್ಮೂರ ಮನೆಯೆಲ್ಲ ಬರಿದು!

ತಿಂಗಳ ಬೆಳಕೆಲ್ಲ, ತಂಗಾಳಿ ಸುಳಿವೆಲ್ಲ
ಸವಿವರಿಲ್ಲದೆ ವ್ಯರ್ಥ! ವ್ಯರ್ಥ!
ತಂಗಾಳಿ ಸುಯ್ಗಳಿ ಮೃತ್ಯುವ ಕರೆಯೆಂದು
ಅಂಜುವರೇನಿದನರ್ಥ!

ಕತ್ತಲೆ ಬಂತೆಂದು ನಡುಗುತ ಬಾಗಿಲ
ಇಕ್ಕಿ ಮಾತಿಲ್ಲದೆ ಮಲಗಿ
ಸುತ್ತಲು ಹಬ್ಬದ ಕತ್ತಲೆ ಬಸಿರೊಳು
ಮೃತ್ಯುವಿನೆಳಲ ಕಾಣುವರು!

ದನ ಕರೆವವರಿಲ್ಲ, ಹೋರಿಗೆ ಮೇವಿಲ್ಲ,
ಪಯಿರ ಕುಯ್ಯಲು ಜನವಿಲ್ಲ;
ಮನೆಯ ಮುಂಗಡೆಯ ಚಪ್ಪರತೊಂಡೆ, ಮಲ್ಲಿಗೆ
ಬಳ್ಳಿಗೆ ನೀರೆರೆವರಿಲ್ಲ!

ಮನೆಯಿದ್ದೂ ಹಾಳೂರ ಪರಿಯಾಯ್ತು, ನಮ್ಮೂರು
ನುಡಿವೊಂದು ನಡೆವೆಣವಾಯ್ತು.
ಮನೆತುಂಬ ಮಸಣದ ಶಾಂತಿಯು ನೆಲಸಿತ್ತು
ನೆರೆನಾಡ ಜನವೊಂದೂ ಬರದು!

ಅಂದು ನಾನೊಂಬತ್ತು ವರುಷದ ಹಸುಳೆಯು,
ದುಂಡಾಗಿದ್ದೆನು ಪುಟ್ಟುವಂತೆ;
ಬಂದ ಹೆಮ್ಮಾರಿಗೆ ತಂದೆತಾಯ್ಗಳು ತುತ್ತು,
ಅಕ್ಕತಂಗಿಯರಂತೆ ಸತ್ತು,

ದಿಕ್ಕಿಲ್ಲದಂತೆ ಅನಾಥನಾಗಿದ್ದೆನು;
ನೆರೆಮನೆ ಸೆಟ್ಟರು ಸಾಕಿ,
ದಿಕ್ಕು ತೋರಿದರಿಂತು, ಜೋಡುಬೀಜವ ಕೊಟ್ಟು
ಮಾದೇವಿ ಕಾಯಲಿ ಅವರ!

ಮುಂದಾದ ಕತೆಯನು ಹೇಳುವೆ ಕೇಳಿರಿ,
ಕಣ್ಣೀರನೊರಸುತ್ತ ಕೇಳಿ;
ಹಿಂದಿನ ನೆನಹೆನ್ನ ನುಡಿಸುತಲಿಹುದಿಂತು,
ಕಣ್ಣೀರ ಕತೆಯಿದ ಕೇಳಿ.

ಮಾರಿಯ ಬಳಗವು ಬಿತ್ತಿದ ಬೆಳೆಯೆಂದು
ಕುರಿಗಳ ಕುಯ್ದರು ಬಹಳ,
ಊರಿನ ಜನವೆಲ್ಲ ಮಡಿವುದು ನಿಂತಿಲ್ಲ
ಊರೊಳು ಸುಖವೆಂಬುದಿಲ್ಲ!

ಹಿರಿದಾದ ಬರಗಾಲ ಬಡಿಯಿತು ಮರುವರ್ಷ,
ಸಿಡುಬಿಂದ ಬದುಕಿದ ಕೆಲರು
ಹೊರಟು ನಮ್ಮೂರಿಂದ ನೆರೆನಾಡೊಳಲೆದರು
ಹೊಟ್ಟೆ ಬಟ್ಟೆಯ ಪಾಡಿಗಾಗಿ!

ಒಳ್ಳೆಯ ಹಳ್ಳಿಯು ಹಾಳಾದ ಹೊಲವಾಯ್ತು,
ಸುಡುಗಾಡ ಸಮನಾಯ್ತು ಇಂದು.
ಇಲ್ಲೆಲ್ಲ ಕಗ್ಗಾಡು, ನರಿನಾಯಿಗಳ ಬೀಡು,
ಹೋಗರೊಬ್ಬೊಬ್ಬರಲ್ಲೆಂದೂ.

ಕತ್ತಲೆ ಕವಿಯಲು ಅರೆಬಿದ್ದ ಮನೆಗಳ
ಒಳಿಯಲ್ಲಿ ದೊಂದಿ ಸಾಲುಗಳು
ಹತ್ತಿರ ಹತ್ತಿರ ಕಲೆಯುತ ನರಳುವ
ದನಿಗಳು ಕೇಳುವುವಿಂದೂ!

ಊರಿನ ಮಾರಿಯ ಗುಡಿಯು ನಿಂತಿದೆ ಇಂದೂ,
ಗುಡಿಮುಂದೆ ಇರುಳೆಲ್ಲಾ ಕೂಡಿ
ಊರೊಳು ಮಡಿದರ ಪ್ರೇತಗಳೆಲ್ಲವು
ಕೀರುತ ಕುಣಿವವು ಎಂದು

ಉದ್ದುದ್ದ ಕತೆಗಳ ಕಟ್ಟಿ ಹೇಳುವರಿಂದು
ಕೇಳಿ ಮೈನಡುಗುವುದಣ್ಣ!
ಬಿದ್ದೂರ ಕತೆಯಿದ ಕೇಳಿ ನೀವೆಲ್ಲರೂ
ಪಾಠವ ಕಲಿಯುವುದಣ್ಣ:—

ಲೋಕದ ಬಾಳೊಂದು ಕನಸೆಂಬ ಮಾತಿದು
ಎಂದಿಗೂ ಸುಳ್ಳಲ್ಲ ನೋಡು!
ಸಾಕಾದ ಬಾಳೆಲ್ಲ ಕೊನೆಗೆ ಕಣ್ಮುಚ್ಚುತ
ಮೈಮರೆವ ಪರಿ ಇದ ನೋಡು!

## ೪೧. ಅಕಾಲಮೃತ್ಯು*

೧

ಹೊತ್ತು ನೆತ್ತಿಯನೇರೆ
ಕತ್ತಲೊತ್ತಿದುದೆ!
ಮಧುನೃಪಾಲನ ಮೋರೆ
ಹಿಮವನೆತ್ತಿದುದೆ!

೨

ಪರಿಮಳದ ಒರತೆ ಇದು
ಬತ್ತಿ ಬರಿದಾಯ್ತೆ?
ಜೀವನದ ಸುರನದಿಯು
ಮಳಲ ಮರೆಯಾಯ್ತೆ?

೩

ನನ್ನಳವೆ, ನಿನ್ನಳವೆ,
ಆರಳವು ಮೃತ್ಯು
ಬೆನ್ನೊಳೇ ನೆಳಲಾಗಿ
ಹಜ್ಜೆ ಹಾಕಿರಲು?

೪

ಮೌನದೀ ಮುಗುಳೆಂತು
ಅರಳಿ ಅರಳಾಯ್ತೊ,
ಅಂತೆ ತಾನಿಂದು ಮೌ
ನದಲಿ ಮರುಳಾಯ್ತು!

೫

ನೋಡು, ನೋಡೀ ದೇಹ
ದವಯವದ ರಚನೆ;
ಹಾಡಲರಿಯದು ಇದರ
ಸೊಬಗ ಕವಿರಸನೆ!

---

* ಕವಿಯ ಅಣ್ಣನ ಹೆಂಡತಿ (ಕೇವಲ ೨೦ ವಯಸ್ಸು) ಆಕಸ್ಮಿಕವಾಗಿ ನೀರಲ್ಲಿ ಬಿದ್ದು ಸತ್ತ ದೃಶ್ಯವನ್ನು ಕಂಡು ಬಂದ ಭಾವವಿದು.

೬

ಬಾಡಿರುವ ಕಣ್ಮಲರ್,
ಬಿಗಿದಿರುವ ತುಟಿಗಳ್,
ಹಾಡುಳಿದ ನುಣ್ಗೊರಲ್!
ಕದಪು ಕನ್ನಡಿಗಳ್!

೭

ಕಾಮನಲರಂಬುವೇ
ಭ್ರೂಲತೆಯಿದಾಯ್ತು,
ಪ್ರೇಮ ಕಲಹದಿನಾರ
ಸೋಲಿದರಿನಾಯ್ತು!

೮

ಎಳಮೆಯೊಳಗಿಂತಳಿವು
ಸಂಗಳಿಪುದೆಂದು
ತಿಳಿವರಾರುಂಟಿದೆಯೊ
ಕೊಲ್ಮೆಯೊಗೆವಂದು

## ೪೭. ಒಡಹುಟ್ಟಿದವರ ಸ್ಮೃತಿ*

೧

ತಂದೆ, ಕರುಣಾನಂದ ವಾರಿಧಿ,
ತಂದೆ, ಹೇ ಸದ್ಗುಣ ಸುಧಾಂಬುಧಿ
ತಂದೆ, ಧರ್ಮದಯಾಪಯೋನಿಧಿ, ತಂದೆ, ಪರದೈವ!
ತಂದೆ, ತವ ಪಾವನ ಪದಾಂಬುಜ-
ವೊಂದೆಗತಿ, ಸದ್ಗತಿ, ಸುಭಿಕ್ಷಾ
ನಂದ, ಮನ್ನಿಸು ಮನ್ನಿಸೆನ್ನಪರಾಧ ಕೋಟಿಗಳ

೨

ಭಾವಿಸಲು, ಪ್ರಾರಬ್ಧಕರ್ಮವ
ದಾವುದೋ ದೂರಿರಿಸಿ, ತವ ಸೇ
ವಾವಲಂಬನ ಭಾಗ್ಯಶೂನ್ಯನ ಮಾಡಿತಾದಡೆಯೂ!
ಭಾವಭಕ್ತಿಯೊಳಿಲ್ಲಿ ನಿಮ್ಮಡಿ
ದಾವರೆಯ ಪಿಡಿದಿಹೆನು, ತಂದೆಯೆ!
ದೇವ ನೀವೇ, ದೈವವೆನಗನ್ಯತ್ರವಿಲ್ಲವಲಾ!

೩

ಹೆತ್ತೊಡಲ ಹಂಬಲವು ಬೆಂಬಿಡ
ದೊತ್ತುತಿದೆ, ಒಡಹುಟ್ಟಿದರ ಮೃತಿ
ಹೊತ್ತಿಸಿದೆ ಹೇರಾಳ ಚಿಂತೆಯ ಬಂದ ಬಡತನದಿ
ಹತ್ತು ದಿಕ್ಕನು ಮುಕ್ಕಲಾಗದೆ
ಮೃತ್ಯು, ಶಿವ, ಶಿವ! ನಮ್ಮನೇ ಬೆಂ
ಒತ್ತಿತೇ ವಿಧಿಲೀಲೆ ಎನಿತು ಮಹೋಗ್ರವೆಲೆ ತಂದೆ!

---

*ಕವಿ 1934ರಲ್ಲಿ ಬೆಂಗಳೂರಲ್ಲಿ ಪತ್ರಿಕೋದ್ಯಮಿಯಾಗಿದ್ದಾಗ ಬಹು ಕಾಲದಿಂದಲೂ ಬುದ್ಧಿ ಸ್ವಾಸ್ಥ್ಯವಿದ್ದಿಲ್ಲದ ಹಿರೇ ಅಣ್ಣನ ಮರಣ ಹಾಗೂ ಹಡದು ತೀರಿಕೊಂಡ ತಂಗಿಯ ಮರಣದ ವರ್ತಮಾನ ಬಂದಾಗ ಬರೆದುದು.

೪

ಸಾವಕಾಲದೊಳೆಷ್ಟು ನೊಂದಳೊ,
ಆವಪರಿಯಿಂದೆಮ್ಮ ನೆನೆದಳೊ,
ಆವ ಮಾತಿಂದೆಮ್ಮ ಕರೆದಳೊ, ಜರೆದಳೋ ತಂಗಿ!
ಭಾವಿಸುವಡರಿದೆನಗೆ! ಅಕಟಕ
ಟಾವ ವಿಧ ಮೃತಿಯೈದಿದನೊ! ಇ
ನ್ನಾವ ನೋವಿಂ ನರಳಿದನೊ ಅಣ್ಣಯ್ಯ ಕಡುನೊಂದು!

೫

ಹುಚ್ಚು ಕಳೆದೇನೆಂದನೋ? ತ
ನ್ನಿಚ್ಛೆ ತೀರದೇಸತ್ತನೋ? ಮೋ
ಣಚ್ಚರಿಯೊಳಾವೆಲ್ಲಿ? ಎನ್ನುತ ಮುಚ್ಚಿದನೊ ಕಣ್ಣ!
ಹುಚ್ಚನೆಂದಾಡುವರೆ ಆತ್ಮಕೆ
ಹುಚ್ಚು! ಹುಚ್ಚೆಲ್ಲುಂಟು? ಕಾಷ್ಟದ
ಕಿಚ್ಚು ಸುಡುವೀಯೊಡಲಿಗಲ್ಲದೆ ಹುಚ್ಚು ಬೇರುಂಟೆ!

೬

ಭುಗಿ ಭುಗಿಲ್ ಭುಗಿಲೆಂದು ಕರ್ಪೊಗೆ
ಯೊಗೆವ ಕಾಳ್ಗಿಚ್ಚಂತೆ ನನ್ನೆದೆ
ಧಗಧಗಿಸುತಿದೆ ಶೋಕವಹ್ನಿ ಜ್ವಾಲೆಯಲಿ ಬೆಂದು!
ನಗು ನಗುತ ವೈರಾಗ್ಯವೆನ್ನನು
ಬಿಗಿದು ಬಾಹಪ್ಪಳಿಸುತಿದೆ, ಬಾ!
ಬೆಗಡುಗೊಳ್ಳದೆ ಬಿಟ್ಟುಬಿಡು ಸಂಸಾರವಿದನೆಂದು.

೭

ಈ ತತುಕ್ಷಣ ಬಿಟ್ಟುಬಿಡಲೆಂ
ದೇತರಾಶೆಯೊ ಪೂತುದೆನ್ನಲಿ,
ಸೋತೆನೆಂಬಾ ಸುಳ್ಳು ಸುಡಿ ಬೆಂಬಳಿಸಿ ನಿಂದಿರಲು;
ಸೋತೆನೇ? ಕಂಗೆಟ್ಟೆನೇ? ಬಲ
ಬೀತುದೇ? ಮುಪ್ಪಡಸಿತೇ? ಇ
ನ್ನೇತಕೀ ಪರಿ ತವಕವೆಂದೆಚ್ಚರಿಸುತಿದೆ ಬುದ್ಧಿ.

೮

ತಂದೆ, ನಿಮ್ಮಡಿಯೊಂದೆ, ಬಂಧುಗ
ಳೊಂದೆ ರೀತಿಯ ಪ್ರೀತಿ, ನಿಮಗೆ
ನ್ನಿಂದ ಸಲಲಿಹ ಋಣವಿದಲ್ಲದೆ ಪೆರತನಾನೆಣಿಸೆ.
ಎಂದಿಗೀ ಋಣ ಮುಕ್ತಿಯೋ, ನಾ
ನಂದೆ ಧನ್ಯ, ಕೃತಾತ್ಮ! ನದುವರೆ
ಗೊಂದೆ ಭಾವವಿದೊಂದೆ ವ್ರತವೆನಗೊಂದೆ ಛಲ ತಂದೆ!

೯

ಇಂತು ಮಾಯಾ ಲೀಲೆ; ಇದು ನಡೆ
ದಂತೆ ನಡೆವುದೆ ಲೋಕ; ಇದರ
ಭ್ಯಂತರವನರಿತವಗೆ ಹೊದ್ದದು ಪಾಪಪುಣ್ಯಗಳು;
ಸಂತೆಯಿದು, ನಾವೆಲ್ಲ ಪಾಂಥರು,
ಪಂಥ ಪಾಡುಗಳಾಟ, ಕತ್ತಲು
ಬಂತೊ, ನಾವಲ್ಲಲ್ಲಿಯೇ ಇದ್ದಂತೆ ಮರೆಯಹೆವು.

೧೦

ಅತ್ತು ಮಾಡುವುದೇನು? ನಗೆಯಿಂ
ದೆತ್ತಿ ತೋರುವುದೇನು? ನಮ್ಮೆದೆ
ಯೊತ್ತಿ ನಿಂದಿರೆ ಮೃತ್ಯು, ದೈನ್ಯಗಳಿಂದು ಕಣ್ಣೆದುರೆ
ಒತ್ತಿತೇ ಎದೆ, ಬಿದ್ದೆವೈ; ಎ
ಚ್ಚೆತ್ತೆವೋ, ಜಯವಾಯ್ತು! ನಾವ್ ಕೈ
ಎತ್ತಬಾರದು ಕಾವ ದೈವವೆ ಕನಲಿ ನಿಂದಿರಲು!

## ೪೩. ದಾಂಪತ್ಯದ ಮುನ್ನುಡಿ

೧

ಬಾ ಗೆಳತಿ, ಬಾ ಮಡದಿ
ಹುಸಿಬಾಳಿನ ಈ ದಡದಿ
ತಂಪಹುದೋ, ಬಿಸಿಲಹುದೋ,
ದುಡುಕದೆ ಕಾಯುವುದು
ನುಡಿಯದೆ ನೋಯುವುದು.

೨

ಇಂದೇನೋ ಮುಂದೇನೋ
ಸಂಸಾರದ ಸವಿಯೇನೋ
ಬಂದುದಕೆದೆಗೊಡಬೇಕೀ
ಚಿಂತೆಯ ಸಂತೆಯಲಿ
ಮಂದಿಯ ಮುಂದೆಯಲಿ.

೩

ಕಳತುಂಬ ಕಾಳಿಹುದು,
ಮಡಿಕೆಯ ಮಡುಗೂಳಹುದು,
ಮಕ್ಕಳ ಪರಿಸೆಯು ಬಹುದು
ಎಂತಾದರು ಚಿಂತೆ
ತಿಳಿದಿರು ಎಲೆ ಕಾಂತೆ!

೪

ಕಳೆಯುಂಟು, ಕೊಳೆಯುಂಟು,
ಹುಸಿ ಮುನಿಸಿನ ಸೆಣಸುಂಟು,
ಒಣೆಯಾಡುವ ಮನಸುಂಟು,
ನಾನೀನೊಂದೆಂಬ
ತಿಳಿವಿದೆ ತಲೆತುಂಬ.

೫

ಆಡುವೆವು, ಹಾಡುವೆವು
ಮುದ್ದಾಡುತ ಕೂಡುವೆವು,
ಕಾಲದ ಜತೆಗೋಡುವೆವು
  ಸುಖ ಶಾಶ್ವತವೆಂದು—
  ಬಗೆಯದೆ ಹುಸಿಯೆಂದು!

೬

ಅತ್ತೇವು, ಸತ್ತೇವು,
ಸಾವವರ ಹೆತ್ತೇವು,
ನೂರಾರ ತೆತ್ತೇವು
  ಒಂದಾದರು ಬರದೂ—
  ಆದರು ಭ್ರಮೆ ಹಿರಿದು!

೭

ಬಾ ಗೆಳತಿ, ಬಾ ಮಡದಿ
ಹುಸಿ ಬಾಳಿನ ಈ ದಡದಿ
ತಂಪಹುದೋ, ಬಿಸಿಲಹುದೋ,
  ದುಡುಕದೆ ಕಾಯುವುದು—
  ನುಡಿಯದೆ ನೋಯುವುದು.

## ೪೪. ಅರಸಿ ಎಂತಿಹಳೊ

(ನಳನ ಕಳವಳ)

ಅರಸಿ ಎಂತಿಹಳೊ, ವಂಚಿಸುತವಳನೈತಂದೆ,
ದೆಸೆದೆಸೆಯ ನೋಡುತಿಹಳೆ?
ಅರಸುವಳೆ ಗಿರಿತೊರೆಯ, ಮರಮಟ್ಟುಗಳ ಬಳಿಯ
ಕರೆಕರೆದು ಮರುಗುತಿಹಳೆ?

ಮೂಡಬಾನ್ ಕೆಂಗುಡಿಯ ತಳೆದಿಹುದು, ನೇಸರನು
ಮೂಡುತಿಹನಲರುಗಳು ಬಿರಿಯುತಿಹವಿದೊ, ದುಂಬಿ
ಹಾಡುತಿವೆ, ಸುಙ್ಕಾರವ ಮಾಡುತಿವೆ ಹಕ್ಕಿಗಳು,
ಕಾಡಿನೊಳಗಾ ಪಳುಕುಗೋಡ ತುದಿಯಲಿ ಆಕೆ,
ಅರಸಿ, ಇನ್ನೆಂತು ಇಹಳೊ!

ಕಂಬನಿಯ ಹೊಳೆ ಹರಿಸಿ, ನಡೆನಡೆದು ಒಸವಳಿದು,
ಕಂಬುಕಂಧರೆ ಆವ ಮರದ ನೆರಳಲಿ ಕುಳಿತು,
ತುಂಬಿದತಿ ದುಗುಡದಿಂ ಹಂಬಲಿಸುತಿಹಳೆನ್ನ,
ಮುಂಬರಿಯಲಾರದೆಯು ಲಂಬಿಸುವ ಬಿಸಿಲಿನಲಿ,
ಅರಸಿ ಇನ್ನೆಂತು ಇಹಳೊ!

ಆಕೆ ಕಳುಹಿದ ಸುಡಿಯ ಗಾಳಿ ತಾರದೆ ಇಹುದೆ?
ಶೋಕದಾವರಣವಂ ದಾಂಟಲಾರದೆ ಇಹುದೆ?
ಜೋಕೆ ಎಂದಾಕೆಯನು ಹರಸುವವರಾರಲ್ಲಿ?
ಈ ಕರುಣೆಯಾಳ್ಕೆ ಎನ್ನೊಳಗಿಹುದನರಿವಲ್ಲಿ,
ಅರಸಿ ಇನ್ನೆಂತು ಇಹಳೊ!

## ೪೫. ಶಕುಂತಲಾ

ಕಣ್ವಾಶ್ರಮೋದ್ಯಾನ ಸತ್ಕುಸುಮ ನೀರೆ!
ಸೌಂದರ್ಯವಲ್ಲರಿಯೆ, ಸುಗುಣಗಂಭೀರೆ!
ಆವನ ಸಿತಾತಪತ್ರದ ನೆರಳನೆಳಸಿ
ಈ ಭಾರತಂ ಸವಿಯಿತಾನಂದದಿರವಂ,
ಆತನೆದೆ ಸಾಭಿಲಾಷಧ್ವನಿಯ ಒಲಿಸಿ
ಶೃಂಗಾರದಲಿ, ಮುಗ್ಧಮಾಳ್ಕೆಯವನುಪಂ
ನೀ ನನೆ ವಿನಾಕಲಂಬಂ, ನಾಕಲೋಕಂ
ಧರೆಗಿತ್ತ ಸೌಂದರ್ಯದಮೃತಮಯ ಕಲಶಂ,
ಚೆಂದುಟಿಯು, ಸುಗ್ಗೊರಲ, ಕೃಶಕಟಿಯಿಮೇಕಂ
ದಿವ್ಯ ಮಧುರಿಮೆ ರೂಪದಳೆದುದಿದೆ ವಿಲಸಂ
ಹಲವಿಲ್ಲವಿನಿತೆಸಳ ಚೆಲ್ವಾಂತ ಪುಷ್ಪಂ
ಈ ಪುರಾಣ ಪ್ರಕರಣಂಗಳೊಳಮೆಲ್ಲಂ
ಇಳೆಯೊಳೆಲ್ಲಂ ಕಾಳಿದಾಸಗೆಣೆಯಿಲ್ಲಂ
ಎಂದು ಜನ ಸುರಿಗುಮನಿಶಾನಂದ ಬಾಷ್ಪಂ.

## ೪೮. ಕೃಷ್ಣಾಕುಮಾರಿ

ಸುಂದರಿಯ ವರಿಸಲಾತುರಿಸಿ, ಶತ್ರು ನೃಪಾಲ
ರಂದು ಹೋರಾಡಲುಜ್ಜುಗಿಸುತಲಿ, ಧರೆಯ
ಖಡುಗ ಹತಿಯಲಿ ಕೆಡೆದು, ಶಾಂತಿದೇಹವನುಡಿದು
ಪೊಡವಿಯನು ನರಕದುರಿಗೆಳೆಯಲೆಳಸಿದರು.
ವೃದ್ಧಪಿತ ಭೀಮಸಿಂಗನ ಕರೆದು ಗಜರಿದರು—
ಯುದ್ಧವೇ ಕೊನೆ ತಿರಸ್ಕಾರದುತ್ತರಕೆ!
ಭೀಮ ಮುಂಗಾಣದೆಯೆ ಮನದಿ ಮರುಗಿದನು, ಸಂ
ಗ್ರಾಮ, ನೃಪರಿಬ್ಬರುಪಟಳದ ಮಧ್ಯದಲಿ.
ಇದನರಿತು ಭೀಮಸುತೆ — ಕೋಮಲಾಸ್ಯಾನಸುಮ
ಬೆದರದೆಯೆ ಯೋಚಿಸಿದಳೊಂದುಪಾಯವನು—
ಕಟುವಿಷವ ಹೀರುತಲಿ ಬಾಲೆಯೊರಗಿದಳು
ಮೃತ್ಯುಶಯ್ಯೆಯ ವಿವಾಹದ ಮಂಟಪದೊಳು!

## ೪೨. ಬೇಕು

೧

ನೀತಿ ನಿರ್ಮಲ ಬೇಕು.
ಮಾತು ಮೃದುವಿರಬೇಕು,
ಪೂತ ಸಂಸಾರದಲಿ
ಸರಳವಿರಬೇಕು;
ಚಿತ್ತ ಶರದಭ್ರದೊಲು
ಶುಭ್ರವಾಗಿರಬೇಕು,
ಕುತ್ತಿಳಿದ ಜೀವನದಿ
ಸೊಗವಿರಲಿಬೇಕು.

೨

ಮಾತು ಮಲ್ಲಿಗೆಯ ಮಧು
ಮೌನದೊಲು ಮುಗುಳಾಗಿ,
ಅರಳಿ ಪರಿಮಳದಿರವ
ತೋರಬೇಕು;
ನೀತಿ ಸಂಗೀತವಂ
ಕೃತಿಯ ತಂತ್ರಿಗಳಲ್ಲಿ
ನುಡಿಸುತಮಿತಾನಂದ
ಗೊಳಲೆಬೇಕು.

೩

ಕೀರ್ತಿ ಪಸರಿಸಬೇಕು,
ಮೂರ್ತಿ ಮರೆದಿರಬೇಕು
ಪೂರ್ತಿಯಾಗಿರಬೇಕು
ಗೆಯ್ಮೆಗರಿವು;
ಆರ್ತಿಯಳಿದಿರಬೇಕು
ವ್ಯರ್ಥ ಭೋಗಂಗಳಲಿ,
ಕಾರ್ತಸ್ವರಂಗಳಂ
ನೀಗಬೇಕು.

೪

ಮುಗಿಲ ಮನೆಯಲಿ ಹೊಳೆವ
ತಾರೆಯೊಲು ಜೀವನದಿ
ಸುಗುಣ ಸ್ವರ್ಣಪ್ರಭೆಯ
ಬೀರಬೇಕು;
ಒಗೆಗೊಳಿಪ ಮಳೆವಿಲ್ಲ
ಬಾಗಿಸೊಲು ಸಜ್ಜನರ
ಸೊಗಕಾಗಿಯನಿಶ ತಲೆ
ವಾಗಬೇಕು.

೫

ಜೀವನದ ನೌಕೆಗಾ
ದಾರಿಯಂ ತೋರುವಡೆ,
ಸತ್ಯವೇ ಧ್ರುವತಾರೆ
ಯಾಗಬೇಕು.
ಭಾವನೆಯ ಮಥನದಲಿ,
ಬದುಕಿನಲಿ ಬಳಲಿದರ
ನೊಲಿಪಮೃತ ಕಲಶವನೆ
ಕಾಣಬೇಕು.

## ೪೮. ಕ್ರಿಸ್ತಜನ್ಮ

೧

ಜೋಕಿಮಂಗನೆಯ ಗರ್ಭಾಂಬುಧಿಯೊಳುದಿಸಿತು ಅ
ನೇಕಯುಗಕೃತಪುಣ್ಯ ಪೀಯೂಷಕಲಶ, ಕ್ರಿ
ಸ್ತೈಕಮಾತೃಸ್ಥಾನ ನಜರತಿನ ಮರಿಯೆಯೆಂ
ಬಮಲಾಭಿಧಾನದಿಂದ;
ಈಕೆಯೇನಾ ದಿವ್ಯ ಮಧುರಿಮೆಯ ರೂಪಮೋ
ಸೀಕೆಯಾಕಾಶ ಸಂಕಲಿತ ಸಂಗೀತಂಗ
ಳೇಕಶ್ರುತಿಸ್ಫುರಿತ ಸಚ್ಛಕ್ತಿರೂಪಮೋ
ನವತರಿಸಿತಿಳೆಯೊಳಿಂತು!

೨

ದಿನದಿನಂ ಮೌನದುರುಕಿರಣ ಪ್ರಭಾರಾಶಿ
ಅನುಗೊಳಿಸಿತಾನನದೊಳೀಕೆಯಿಂಬಿಟ್ಟ ಸತ್ಯ
ದಿನಿರಸಂ ಕ್ರಿಸ್ತಗರ್ಭಂಗೊಂಡು ಶೋಭಿಪೊಲು,
ಅದ್ಭುತಮನಂತ ಸತ್ವಂ!
ಅಸಿತರೊಳಗೊಂದು ಸಂಜೆಯಲಿ, ದಿವ್ಯ ಧ್ಯಾನ
ಮನದಿ ಮೈಮರೆದು ಮರಿಯಳ್ ಸುಖದಿನಿರಲಭ್ರ
ದಿನಿದನಿಯಿನೊಂದು, ಶುಭ್ರಜ್ಯೋತಿ, ದೇವದೂ
ತಂ, [1]ಗವೀರಲನೊಗೆದುದು!

೩

ಮಧುರತರ ಮೌನಾಸ್ಯಗೊಂದು ಸಂದೇಶದಲಿ,
ಹೃದಯದಲಿ ಬಲಿವ ಸಂಗೀತವಿಶ್ವವಿಶಾಲ
ವದು ಸತ್ಯಜ್ಞಾನದಾನಂದ ರತ್ನಪ್ರಭಾ
ಪುಂಜವೆಂದರಿವುದೆಂದಂ;
ಇದನೊಲಿದು ಕೇಳಿದಾ ಕನ್ಯೆ ವಿಸ್ಮಯದಿಂದ
ಲಧರ ಕಂಪಿಸಲೊರೆದಳತಿ ದೀನಭಾವದಲಿ,
ಬದುಕಿಸೀ ಬವಣೆಯಲಿ ಬೆಂದೆದೆಯೊಳೇನಮೃತ
ಕಲಶಹುದುಗಿರುವುದುಂಟೆ?

---

1 ಗವೀರಲ = ಗಬ್ರಿಯೇಲ್

೪

ದೇವದೂತಂ ಗವೀರಲನಿಂತು ಪರಿಮಳದ
ಸವ್ಯ ಸಂದೇಶವನ್ನಿತ್ತು ಕಣ್ಮರೆಯಾಗ
ಲವ್ಯಕ್ತ ಶಕ್ತಿಯಾ ಸವಿಗನಸನುಂಡುಂಡು
ಮೈಯನೀಡಾಡಿ ಮರಿಯೇ,
ಭವ್ಯಭಾವನೆಯೊಳಿರಲತ್ತಲೂರುರಿಗೊಂಡು
ದವ್ಯವಸ್ಥಿತ ರಾಜ್ಯಸೂತ್ರ ಸಂಚಾಲನದಿ;
ಭಾವಿಕರು ಹೊಸತೊಂದು ಹೊಂಬೆಳಕ ನೀಕ್ಷಿಸಲ-
ಸಜ್ಜಾಗಲೋರೆಯುತಿಹರು!

೫

ತಿಳಿವಿನೊರತೆಯು ಒತ್ತಿತಳಿವಳಲು ತಲೆಯೆತ್ತಿ
ಮುಳಿಸಿಂದಲಿಳೆಯನಾವರಿಸೆ, ಧರ್ಮದ ಜೀವ
ಕಳೆಯುಳಿದ ಸುಮಮಾಲೆಯೊಲು ಸೊರಗಿ ಪರರಾಳ್ಕೆ
ಯುಳಿವದಿನವಿದಿರುನೋಡಿ
ತಳಿರೊಂದ ತೋರಿತೋ, ಅಲರೊಂದ ಸಾರಿತೋ,
ಹಲವು ಮಿಂಚಿನದಾರದೊಂದು ದಾಮವನಾಂತು
ಬೆಳಕಿನೊಂದೊಸಗೆಯನ್ನಿಂತು ಬೀರಿತೊ ಎಂಬೊ
ಲಾ ಮರಿಯೆ ರಂಜಿಸಿದಳು!

೬

ಮೃತ್ಯುವಿನ ಕಣಿವೆಯಿದೊ, ಈ ಭವದ ತಳ್ಕೆಯಲಿ
ಸುತ್ತಿದಜ್ಞಾನಾಸುರನ ಭಯಂಕರ ಶಿರವೊ,
ಹೊತ್ತು ಮುನ್ನೀರರಿಯ ಮನೆಯೊಳೀಂಟಿದ ಗರಳ
ವೆನೆ ಮುಸುಕಿದಿರುಳ ನಡುವೆ,
ಏತ್ತಲಮ್[2] ಪುರದೊಂದು ದಟ್ಟಣೆಯ ಕೇರಿಯಲಿ
ಕತ್ತಲಿಸಿದೊಂದು ಕಿರುಮನೆಯ ಗೋಶಾಲೆಯಲಿ
ಸುತ್ತು ಪಾದಿರುಳೆದೆಯೊಳುರಿವ ಮಣಿದೀಪದೊಲು
ಮರಿಯೆ ಪತಿಯೊಡನೆಸೆದಳು!

---

2 ಏತ್ತಲಮ್ = ಬೇತ್ಲಹೇಮ್

೭

ಇರುಳದೋ ಗಂಭೀರ, ಭೀಕರ ನಿಶಾಚರಗ
ಳೊರಲದೋ ಗಂಭೀರ, ನಿಶಿಯೊಳವಿತಾ ಮೌನ
ದಿರವದೋ ಗಂಭೀರ, ಎತ್ತೆತ್ತಲುಂ ರಾತ್ರಿ
ಗಮನ ಗಂಭೀರಮಾಗೆ,
ಮಿರುಗುವಾ ನಕ್ಷತ್ರತತಿಯು ಮಂದಸ್ಮಿತಂ.
ಮೊರೆವಿರುಳ ಹಕ್ಕಿ ಮೌನವನಾಂತು ವಿಸ್ಮಿತಂ.
ಧರೆಯೊಳಿಂತಿರಲಾಗ ಕ್ರಿಸ್ತಜನ್ಮಂ ಮರಿಯೆ
ಗರ್ಭದಿಂದಿಳಿದುದಿಳೆಗೆ!

೮

ಆಗಳದ್ಭುತಮಾಯ್ತು, ಕೋಟಿತಾರಾದ್ಯುತಿಗ
ಳಾಗಸದೊಳೊಂದಾಗಿ ನಲಿದುಲಿವ ತೊರೆಯಂತೆ
ರಾಗರಸದಿಂ ಪರಿಯೆ, ಲೋಕರಕ್ಷಕ ಜನಿಸಿ
ದಾವಾರ್ತೆಯೊರೆಯುವಂತೆ,
ತ್ಯಾಗಯೋಗಗಳೇಕ ತಾನಮಾದತ್ತಲ್ಲಿ,
ರಾಗಭೋಗಗಳ ಹೂಸದಾರಿ ಹೊಳೆದಿತ್ತಲ್ಲಿ,
ರಾಗವೇ ಜೀವನದ ರಾಗ— ಈ ಘನತತ್ವ
ದರಿವು ಕುಡಿಯೊಡೆದುವಲ್ಲಿ!

೯

ಇರುಳಕೊನೆಗುಳಿದೊಂದು ಹೊಳೆವ ತಾರಕೆ ಧರೆಗೆ
ಪರಿದು, ಮೂಡಲದಿನುದಯಿಸುವ ಭಾಸ್ಕರಬಿಂಬ
ದರಿವನಿಳೆಗೀವಂತೆ, ದೇವದೂತಂ ತೋರಿ
ಕುರುಬರೆದೆಗೊರೆದನಿಂತು—
ದೊರೆಯ ಜನ್ಮದ ಬೆಳಕು ದೊರೆತುದೀ ಬೆಳಗಿನಲಿ,
ದೊರೆ ಇಹನು, ಬಂದಿಹನು ಪ್ರೇಮನೇಮಗಳೆಂಬ
ಕರವಾಲವಿಡಿದಿಹನು, ಸಗ್ಗಸೊಗ ತಂದಿಹನು,
ಬಳಿಯೊಳಿಹನರಸಿ, ಪೋಗಿ.

೧೦

ದೊರೆಯ ಸಿಂಗರಕಾಗಿ ತಳಿರುಗಳ ಹೂವುಗಳ.
ದೊರೆಗೆ ಕಾಣಿಕೆಯಾಗಿ ಹಣ್ಣುಗಳ, ಪರಿಮಳದ
ದೊರೆತನಿತು ಒಡವೆಗಳ ತಿರಿತಂದು ನಲಿನಲಿದು
ಹೊರಟರಾ ಕುರುಬರಾಗ,
ದೊರೆಯ ಸಂದೇಶ ತಂಗಾಳಿಯಲಿ ಹರಹಿತೆನೆ.
ದೊರೆತಂದ ತಿಳಿವು ದೀವಿಗೆಯ ಕುಡಿ ಕೊನರಿತೆನೆ.
ಪರಿಮಳಂ ಪಸರಿಸಿತು, ಹೊಂಬಿಸಿಲ್ ಲಂಬಿಸಿತು,
ಶುಭ್ರಪ್ರಭಾತವಾಯ್ತು!

## ೪೯. ಸನ್ಯಾಸಿ

ಪಾಪನಾಶಿನಿ ತುಂಗೆ ಹರಿಯುತಿಹಳಲ್ಲಿ
ಮೌನವಂ ಕುಡಿಕುಡಿದು ಇಕ್ಕೆಲದ ಕಾಂತಾರ
ತಾಯಿ ತುಂಗೆಯ ತಡಿಯ ತೊಟ್ಟಿಲೊಳ್ ಮಲಗಿಹವು.
ತುಂಗೆಯೋ, ಹಗಲಿರುಳನೆಣಿಸದೆಯೆ ಮೆಲ್ಲನಿಯ
ಜೋಗುಳದ ಹಾಡುಗಳ ಜಾಗರದಿ ಹಾಡುವಳು.

ಈ ಇರುಳಿನೀ ಶಾಂತಿಯೀ ಸಾಳವೇಂ ಮಧುರ!
ನಟ್ಟಿರುಳ ಮೌನವಿದಕಿನಿತು ಸಂಭ್ರಮವೇಕೆ?
ಹೊಳೆವ ತಾರಾವಳಿಯ ಹಾರ, ಚಂದ್ರನ ಮಕುಟ,
ತಿಳಿನೀರ ತುಂಗೆ ಕೈಗನ್ನಡಿ — ಇದೇಂ ಬೆಡಗೋ!

ಗೋಡೆಗಳ ಮಧ್ಯೆ ಮೈಮರೆದು ನಿದ್ರಿಸುತಿರುವ
ಮೂಢ ಮಾನವ ಲೋಕ! ಏಂ ತಂಪು ಬೆಳ್ದಿಂಗಲ್!
ಇದನಿನಿಸುಮೀಂಟದೆಯೆ, ತಾರೆಗಳ ನೀರವದ
ಗಾನವಿದನಾಲಿಸದೆ, ಬೆಳ್ಮುಗಿಲೊಳಾಡುವೀ
ತಂಗದಿರನಾಟಗಳ ದಿಟ್ಟಿಸದೆ ಮಲಗಿಹರೆ?

ಏಕೆನಗೆ ಸನ್ಯಾಸಿಗೀ ಲೋಕಗಳ ಚಿಂತೆ?
ಆಸೆ ಎಲ್ಲವ ಸುಟ್ಟು, ಏಕಾಂತ ವಾಸದಲಿ,
ನೀರವ ಸಮಾಧಿಯಲಿ ಚಿತ್ಪ್ರಭೆಯ ಕಾಂಬವಗೆ
ಏತಕೀ ಲೋಕದಾಸೆಗಳ ತೊಡಕುಗಳು?

ಆಸೆ — ನರರೆದೆಯೊಳಗೆ ದಳ್ಳುರಿವ ಕಾಳ್ಗಿಚ್ಚು,
ಸಂಸಾರಸಾಗರವನಿಂಗಿಸುವ ವಡಬಾಗ್ನಿ!
ಅದನೀಂಟಿ ಪೊಲ್ಲಗೆಯ್ಮೆಯ ನೆನಿತನೆಸಗುವುದು
ಲೋಕ! ಮಾನವ ಲೋಕ! ಹಣವೊಂದು, ಹೆಣ್ಣೊಂದು
ಏನನೂ ಮಾಡಿಪುದು. ನೀತಿನಿಯಮಗಳೆಲ್ಲ
ಕಳೆಯುಳಿದ ಸುಮದಂತೆ, ಹಗಲ ತಾರೆಗಳಂತೆ,
ನಿರ್ಜೀವ, ನಿರ್ವೀರ್ಯ! ನಿರ್ಮಲತೆ ಇನಿಸಿಲ್ಲ!

ಓ ತಾಯೆ, ತುಂಗೆ! ಕೇಳ್ ದುರ್ಬಲರ ಮೊರೆಯ.
ಬಾಲ ವಿಧವೆಯರ ಎದೆ ಕೊರೆವ ಗೋಳನೆ ಕೇಳು!
ಜಾತಿಜಾತಿಗಳೆಂಬ ನೀತಿಯುಳಿದಾಳುಗಳ
ತುಮುಲ ಯುದ್ಧ ಧ್ವನಿಯ ಕೇಳು! ಅಧಿಕಾರಿಗಳ
ಹೂಂಕಾರ ದರ್ಪಗಳ ಕೇಳು! ದೇವಾಲಯವ
ವಾರನಾರೀ ನಿವಾಸವ ಮಾಡಿ, ಪರಿಶುದ್ಧ
ಜೀವನವ ಪಾಳ್ಗೆಡೆದ ದಾನವರು ಪೂಜಿಸುವ
ದೇಗುಲದ ಗಂಟೆಗಳ ದನಿಯ ಕೇಳ್! ಕೇಳದರ
ಗೋಳ ಕೇಳ್! ಪ್ರಳಯಾಗ್ನಿ ದಳ್ಳುರಿಯುತಿಹುದೆಂದು
ದೇಗುಲದ ಭೇರಿಗಳ್ ಭೋರೆಂದು ಗರ್ಜಿಪುವು!!

ಮಾನವ ಜನಾಂಗದಲಿ ತುಳಿಮೆಟ್ಟಿದವರಿವರ್!
ಜಡತನದ ಬೆಂಕಿಯೊಳ್ ಬೆಂದು ಬೆಂಡಾದವರ್!
ಪರರಾಳ್ಕೆಯೊಳ್ ನುಚ್ಚುನುರಿಯಾದ ಜೀವಿಗಳ್!
ಪರದಾಸ್ಯದಿಂ ಕೊರಲ್ ಮುರಿವುದರಿಯದರಿವರ್!
ಅರೆಹೊಟ್ಟೆ ಉಂಡು, ಅಲೆಯಲೆವ ಸೋಮಾರಿಗಳ್!
ಹಾ! ಎನ್ನ ತಾಯ್ನಾಡೆ! ಭಾರತವೆ! ನಿನಗಿಂತು
ದುರ್ಗತಿಯ ತಂದರಿವರೆಂದು ಶಪಿಸುತಲಿಹೆಯ?
ತಮ್ಮೊಳೊಳ ಕೋಟೆಯಿಂ ಕಾವಾಡಿ ಪರರಿಗಿದೊ
ಹೇಡಿತನದಿಂ ನಿನ್ನ ಮಾರಿದರ್, ಮಾರಿದರ್!

ಹೊಂಬೆಳೆಯ ಬೆಳೆವ, ಕಡಲುಲಿಯ ನಲ್ಮೆಯ ನಾಡೆ!
ಸಕ್ಕದದ ಹೊಂಗನಸ ಕಂಡೆನ್ನ ತಾಯ್ನಾಡೆ!
ತುಂಗೆ, ಗಂಗೆಗಳೆಂಬ ಸುರಧೇನು ಹಾಲಿತ್ತ
ಪರಮ ಪುಣ್ಯಕ್ಷೇತ್ರ! ಓ ಎನ್ನ ತಾಯ್ನಾಡೆ!
ಭೀಕರದ ಭಾರತವ, ಘೋರ ರಾಮಾಯಣವ
ಚಿತ್ರಿಸಿದ ಕೆಚ್ಚೆಲ್ಲಿ? ಈಗೆಲ್ಲಿ ಆ ಕೆಚ್ಚು?

ಅಗೊ, ನೋಡು, ಮೂಡಲದಿ ಮೂಡುತಿದೆ ಹೊತ್ತು!
ಕತ್ತಲೆಯ ಬಿತ್ತರದ ಕೊತ್ತಲವು ಕುಸಿದಿಹುದು,

ನಿರ್ಮಲ ಸ್ಮಿತವೊಂದು, ಬಲ್ಲೊಗದ, ಬಲ್ಲೊಬಗ
ಸರಿಯ ಸೂಸುತ್ತಿಹುದು! ಓ ತಾಯೆ ನಿನಗಿಂದು
ಮಂಗಲೋತ್ಸವವೊಂದು ಕಾದು ನಿಂತಿಹುದು.
ಏ ತೆರನ ಮಂಗಲಂ ತಿಳಿದೆಯಾ ತಾಯೆ?
ವೇದಘೋಷದ ಮಧ್ಯೆ, ಹೋಮಧೂಮದ ಮಧ್ಯೆ
ಶಾಂತಿ ಮಂತ್ರಸ್ಫುರಣಕೊಲಿವ ಮಂಗಲವಲ್ಲ!
ವೀರರಾರ್ಭಟದಿಂದ, ತೋಪುಗಳ ಹೊಗೆಯಿಂದ,
ಕೂರಸಿಯ ಭೀಕರದ ಝಣಝಣತ್ಕಾರದಿಂ
ದುದಿಪ ಉತ್ಕ್ರಾಂತಿಯೇ ನಿನಗೊಂದು ಮಂಗಲಂ!

## ೫೦. ಶ್ರೀರಂಗಪಟ್ಟಣ*

೧

ನೋಡಿಲ್ಲಿ! ಕಾವೇರಿ ನೀಳ್ತೋಳ್ಗಳಿಂದೆತ್ತಿ
ಆಡಿಸಿದ ಮಗುವಿನೀ ಕ್ರೂರವಿಧಿ ನೋಟಂ!
ಮಳೆ, ಬಿಸಿಲ್, ಬಿರುಗಾಳಿ, ಬರಸಿಡಿಲ್ಗಳ ನುಂಗಿ,
ಮಲೆನಾಡ ಗರ್ಭದಲಿ ಬೆಳೆದುದಿಸಿ ಬಂದು,
ಇಳೆಯೊಳೆಲ್ಲೆಡೆ ತನ್ನ ಆಟಪಾಟವ ತೋರಿ,
ನಲಿದುಲಿದು, ಮರುಳಾಗಿ, ಮುಗುಳು ನಗೆಗಳ ಬೀರಿ,
ಧರೆಯ ನಾಯಕರನೆಲ್ಲರ ನೇಹಿಗರ ಮಾಡಿ,
ಉರಿವೆದೆಯ ಕೆಚ್ಚಿಂದಲವರೊಡನೆ ಎಳೆದಾಡಿ,
ಕೊನೆಗಿಂತು ಮೌನದಲಿ, ಭೀಕರದ ಮೌನದಲಿ,
ಮುನಿ ಸಮಾಧಿಯಲಿ ಕುಳಿತಿರ್ಪವೊಲು ಕುಳಿತಿಹುದು!

೨

ಇನ್ನೂರು ವರುಷಗಳ ಜವನಿಕೆಯ ಹಿಂದೆ,
ಚಿತ್ರಿಸಿರುವಾ ನೋಟವೆಲ್ಲ ಕಣ್ಮುಂದೆ—
ಎರಡು ಶತಕದ ಮೊದಲ ರಾಜವೀಥಿಗಳು,
ಹರಿವ ಕಾವೇರಿ ನಿರ್ಮಲ ತರಂಗಿಣಿಯು,
ಮೇಲ್ಮುಗಿಲ ಮುದ್ದಿಡುವ ಕೊತ್ತಳದ ಸಾಲು,
ಕೊತ್ತಳದ ಮೇಲ್ನಿಂತ ಸೈನಿಕರ ಸಾಲು.
ಅಲ್ಲಲ್ಲಿ ಸಿಡಿಮದ್ದು ಭಾಂಡಗಳು, ತೋಪು
ಕಾವಲರ, ಕಾಲಾಳ ಎಚ್ಚರದ ಕಾಪು,
ಮೈಸೂರ ಭೂಪತಿಯ ಕೀರ್ತಿಸುವ ಭೇರಿ,
ನಾಲ್ದೆಸೆಯ ಮೊಳಗಿಸುವ ಯುದ್ಧದ ತುತೂರಿ,
ಇಲ್ಲಿಹುದು ಸುಲ್ತಾನನರಮನೆಯ ಸಾಲು!
ಕನಸುಗಳ ಕಲ್ಗವನ ಸಿರಿಯ ಹಿರಿ ಬಾಳು!
ಆರಲ್ಲಿ, ಹಿರಿದ ಬಾಳ್ ಝಳಪಿಸುತ ನಿಂತು
ದೂರದ ದಿಗಂತವನು ದಿಟ್ಟಿಸುವುದಿಂತು?
ಓಹೊ! ಕಲಿ ಸುಲ್ತಾನ ಮೈಸೂರ ಹುಲಿಯು,

---

* 1930ನೇ ಜನವರಿಯಲ್ಲಿ ಶ್ರೀರಂಗಪಟ್ಟಣವನ್ನು ನೋಡಿ ಬಂದಾಗ ಶಿವಮೊಗ್ಗೆಯ "ಮ್ಯಾಜೆಸ್ಟಿಕ್" ಹೋಟೆಲಿನಲ್ಲಿ ಕೂತು ಬರೆದದ್ದು.

ಕೆಚ್ಚೆದೆಯ, ಕೆಂಗಣ್ಣ ರಣಕುತೂಹಲಿಯು!
ಸಿಡಿಲಂತೆ ಘುಡುಘುಡಿಸಿ ಹೊಡೆವ ಬಲ್ದನಿಯಿಂ
ಪಡೆವಳರನೆಚ್ಚರಿಪುವಾರ್ಬಟವಿದೇನು?
ಶ್ರೀರಂಗಪಟ್ಟಣವ ಮುತ್ತಿದವು ಮುಂದೆ—
ಆಂಗ್ಲ ಸೈನ್ಯಸಮೂಹ ಟಿಪ್ಪು ಕಣ್ಮುಂದೆ!
ಸುಡಿದ ನುಡಿ ಸಿಡಿದ ಕಿಡಿ ಕಾಳ್ಗಿಚ್ಚಿನಂತೆ
ಹಬ್ಬುತಲಿ ಗಡಣಿಸಿತು ಸೈನಿಕರ ಸಂತೆ!
ಸುಗ್ಗಿ ನಡೆ ಕುಗ್ಗದೆಯೆ ಮುಂದೆ ದೌಡೊತ್ತಿ!
ಬಗ್ಗಿ ಬಡಿ, ಹಿಗ್ಗಿ ಹಿಡಿ, ನೆಗ್ಗಿ ನೆಡು ಕತ್ತಿ!
ಕಣಿ ಖಣಿಲ್, ಗಣ ಘಣಿಲ್, ಘನ ನಿನಾದದಲಿ
ಕುಣಿದು ರಣಸಿರಿಯನೊಲಿಸಿದರು ಮೋದದಲಿ.
ಅರ್ಧಚಂದ್ರೋದಯದ ಕೇತನದ ಕೆಳಗೆ
ಆರ್ಬಟಿಸಿ ಮೈಮರೆದು ಕಾದಿದರು ಇಳೆಗೆ!
ನೂರು ಸಾವಿರ ಯೋಧರೊಂದಾಗಿ ನುಗ್ಗಿ
ಸುಲ್ತಾನ ಸೇನೆಯನು ಕಬಳಿಸಿದರೊಗ್ಗಿ!
ನೆತ್ತರಂ, ನೆತ್ತರಂ, ನೆತ್ತರಿನ ಹೊಳೆಯು,
ಕತ್ತಿಗಳ, ಕೈದುಗಳ, ಗುಂಡುಗಳ ಮಳೆಯು!
ಆರಿವಂ ಬಾಗಿಲೆಡೆ ಬಿದ್ದಿಹುದು ಮಡಿದು!
ಆರಿಲ್ಲ ಬಿಸಿ ರಕುತ! ಕೈಕಾಲ್ಗಳುಡಿದು?
ಅಯ್ಯೋ! ಕಲಿಸುಲ್ತಾನ, ಮೈಸೂರ ಸಿಂಹ!
ಹಾರಾಡಿ, ಹೋರಾಡಿ ಮಲಗಿಹುದೆ ಸಿಂಹ!

೩.

ಯಾತ್ರಿಕನೆ, ಏಕಿಂತು
ಸ್ತಬ್ಧನಾಗಿರುವೆ?
ಮಾತಿಲ್ಲದೇಕಿಂತು
ಮೌನವಾಗಿರುವೆ?
ಕಣ್ಣೀರ ಕೋಡಿಯೇಂ
ನಿನ್ನ ಕಣ್ಗಳಲಿ?
ಈ ಪರಿಯ ನಡುಕವೇ
ನಿನ್ನಂಗಗಳಲಿ?

ಸೊಬಗುಗುವ ಹೂದೋಟ
ಮಸಣವಾಯ್ತೆಂದೊ?
ಸೊಬಗಳಿದ, ಸಿರಿಯುಳಿದ
ಕಾಡಾಯ್ತಿದೆಂದೂ?
ಅರೆನಿಮಿಷ ಕಣ್ಮುಚ್ಚಿ
ಭಾವದಲಿ ನೋಡು —
ಬಿರಿದೆಸಳ ಹೂವಾಗಿ
ತೋರ್ಪುದೀ ಕಾಡು!

೬

ಚಿತ್ರಭಿತ್ತಿಯೊಳಿಂತು
ಚಿತ್ರಗಳು ತೋರಿ,
ನೋಟಕನ ಕಣ್ಮನವ
ಸೆಳೆಯುವುವು ಸಾರಿ.
ಕೊತ್ತಳಂ ಕಲ್ಗುಪ್ಪೆ,
ಬೀದಿ ಮುಳ್ದೋಟ;
ಸುಲ್ತಾನಸರಮನೆಯು
ತಿಪ್ಪೆಗಳ ಕೂಟ!
ಛಲದಿಂದ ಕೌರವನ
ಸಿರಿಯುವೊಲಾ ಮೆರೆದು,
ಬಲದಿಂದ ಬಲರಾಮ
ಸುರ್ಕಿಸೊಲ್ ಉರಿದು.
ಕೊನೆಗಿಂತು, ಬಯಲ ತಂ
ಗಾಳಿಯೊಲ್ ಪರಿದು,
ಮಾತುಳಿದು ಮೌನದಿಂ
ಬಿದ್ದಹುದು, ಬರಿದು!
ಕವಿಯ ಭಾವಕ್ಕೊಂದು
ರಾಗವೀಯುವುದು,
ಭುವಿಯ ಭಾಗ್ಯಕ್ಕೊಂದು
ಹೆಸರನೀಯುವುದು!

## ೫೧. ಮಹಾತ್ಮಾ ಗಾಂಧಿಗೆ*

೧

ಹತ್ತು ಶತಮಾನಗಳ ದಾಸ್ಯಭಾರವ ಹೊತ್ತು
ಕತ್ತು ಬಗ್ಗಿಸಿ ಮಾತೆ ನಿಂತಿರುವಳೀ ಹೊತ್ತು!
ಹೆತ್ತ ಮಕ್ಕಳು ಹಸಿದು ಹಲಬುತಿರಲಜ್ಞಾನ
ಕತ್ತಲೆಯ ಕಾರೊಡ್ಡು ದಾರಿಗಟ್ಟಿರೆ, ಮಾನ
ಎತ್ತೆತ್ತಲೋ ಹಾರಿ ಮಾಯವಾಗಿರೆ ತೀರ,
ಹೆತ್ತಬ್ಬೆ ಹಾರೈಸಲುದಿಸಿ ಬಂದನು ಧೀರ!
ಸತ್ಯ, ಶಾಂತಿ, ಅಹಿಂಸೆ—ಸತ್ಯಲೋಕದ ಬಿತ್ತು—
ಮರ್ತ್ಯ ಭುವಿಯೊಳಗರಳಿ ಸೂಸೆ ಸುಮನೋಗಂಧ
ಭಾರತಾಂಬೆಯ ಮಡಿಲೊಳಿಟ್ಟೆಯಲೆ ಜಸವೆತ್ತು!
ಕರ್ಮವೀರನುದಾರ ಕರ್ಮಚಂದ ಕುಮಾರ
ಮೋಹನನು ಮೋಹನನೆ; ದೀನ ಸೇವಾನಂದ
ದಾಸ ರತ್ನನು; ಗಾಂಧಿಯೆಂಬ ಸುಂದರ ನಾಮ
ಮಹಿಮೆ ಮಂಗಳಧಾಮ! ದಿನ ದಿನಂ ಪಸರಿಸುವ
ಕೀರ್ತಿಯಿಂದಿನಿದಾಯ್ತು; ದೀರ್ಘಾಯುಮಸ್ತು!

೨

ಸತ್ಯದ ಹಿಮಾದ್ರಿ ಶಿಖರದೊಳಚಲ ಮಾನಸದೆ
ನಿತ್ತು, ನಿರ್ಮಲ ವಿಪುಲ ಪ್ರೇಮಗಂಗೆಯೊಳೆಸೆದೆ.
ಕೊಲೆ, ಸುಲಿಗೆ, ಕಳುವು, ಕಾಳೆಗವೆಂಬ ಕಾರಿರುಳು
ಇಳೆಯ ನುಂಗಿರೆ, ನಿನ್ನ ಬಾಳ ಮಿಂಚಿನ ಸರಳು
ನೆತ್ತರಿನ ನದಿ ದಾಂಟಿ, ಅಮೃತತತ್ವಮನ್ನೀಂಟಿ,
ಹತ್ತು ಶತಮಾನದಾಯಸವನಿದೊ ತರಿದೊಟ್ಟಿ,
ಭೂವ್ಯೋಮಗಳನೊಂದೆ ಹಿಡಿತದಲಿ ಹಿಡಿದಂತೆ,
ದಿವ್ಯ ಪ್ರಭಾವಳಿಯ ನಡುವಿನಲಿ ನೀನಿಂತೆ!
ಪರತಂತ್ರಕಿದೊ ಕುಣಿವ ಸೂತ್ರಗೊಂಬೆಗಳಂತೆ,
ಹಿರಿಯ ಹಿಂದಿನ ಜನದ ಸೂತ್ರಗಳ ಮರೆದಂತೆ,
ಬದ್ಧವಾಯಿತು ಜನತೆ, ಬಿದ್ದುಹೋಯಿತು ಘನತೆ,

*ಮಹಾತ್ಮಾಗಾಂಧಿಯವರ ೬೬ನೆಯ ಹಾಗೂ ೭೦ನೆಯ ಹುಟ್ಟಿದ ದಿನ ಬರೆದುದು.

ಉದ್ಧರಿಪರಾರೆನಲ್ ಬೆನ್ನೊಳೆತ್ತಿದೆ ಸಮತೆ!
ಹಲವುಗಾಲದ ಹಳೆಯ ಶಸ್ತ್ರ, ಶಾಸ್ತ್ರಚ್ಛಿದ್ರ!
ನಲವಿಂದ ಗೆಲವಿಂದ ಗೆದ್ದೆ, ಭಾರತಭದ್ರ!
ನಿನ್ನ ಹೊರತಾರುಂಟು ಗಾಂಧಿ ನಮಗಿಂದು?
ನಿನ್ನ ಜೀವನ ಭಾರತವ್ರಜದ ಮುಂದು!

## ೫೭. ಕನ್ನಡ ತಾಯ ಪಾದಕ್ಕೆ

ತಾಯೆ, ಕನ್ನಡದೇವಿ! ಕೈಗೊಳೆನ್ನೀ ಸೇವೆ
ತಾಯೆ, ನಿನಗಳ್ತಿಯಿಂದೀವೆ ನುಡಿದೊಡವ!

ಪಂಪನೊಲು ಕಂಪುಗುವ ಕವನ ಕುಸುಮವನಿತ್ತು
ಸೊಂಪಿನುತ್ಸವದಿ ಪೂಜಿಸಲರಿಯೆನು;
ರನ್ನ, ಕವಿರನ್ನನೊಲು, ರತ್ನರಾಶಿಯನಿತ್ತು,
ರತ್ನಗರ್ಭೆ ಎಂದು ಹೊಗಳಲರಿಯೆಂ!

ಕನ್ನಡದ ಕಪಿಚೂತವನ ಚೈತ್ರನೊಲು ನಿನ್ನ
ಭಾಗ್ಯೋತ್ಸವಕೆ ಮಧುವ ತರಲಾರೆನು;
ಬಣಗು ಕವಿಗಳನು ಲೆಕ್ಕಿಸದ ಕಬ್ಬಿಗರಾಯ
ನೊಲು ನಿನ್ನ ಕೀರ್ತಿಗಾನವ ಹಾಡೆನು,

ಇನ್ನನಿತೊ ಇಂಪಿಂದ ಕವಿಗಳೆನಿಬರೊ ಜನಿಸಿ
ನಿನ್ನ ರೂಪವನು ಬಣ್ಣಿಸಿ ಬರೆದೊಡಂ,
ಮುನ್ನೆಸೆವನಂತಕಾಲವೆ ನುಡಿಯಲಾಂ ನಿನ್ನ
ಬಣ್ಣಿಸಿದೆನೋ ಇಲ್ಲವೆಂಬ ನಿಜವ!